Registered : # RNP/ KA/ BGS/ 2172/ 2018-20 Dtd. 02-07-2012
Posted at PSO, Mysore Road Bengaluru on 13th of Every Month

ಪುಟಗಳು–20

# ಅತಿಥಿ ದೇವೋಭವ

ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಮುಖವಾಣಿ www.bangalorehotelsassn.com

ಸಂಪುಟ : 9 ಸಂಚಿಕೆ : 3 RNI # : KAR KAN/2009/30387 Dtd: 19-03-12 ಜುಲೈ–2018 ರೂ. 10/–

## ಬಿಬಿಹೆಚ್‌ಎ ಕಾರ್ಯಾಲಯದಲ್ಲಿ ಕೆಪಿಹೆಚ್‌ಆರ್‌ಎ ನೂತನ ಪದಾಧಿಕಾರಿಗಳಿಗೆ ಅಭಿನಂದನೆ






**AVAILABLE FOR SALE / LONG LEASE**

**Star Rated Hotels, Resorts & Boutique Hotels and Restaurants in operational condition at Bangalore, Chennai, Puduchery, Goa, Pune Mumbai, NCR New Delhi and Hyderabad.**

**ONLY direct Entrepreneurs / Investors to contact Colonel (Retired)**

**V S Ranganathan, Proprietor**

# Well Worth India

**Professional Management & Consultant Services& Facilitators**

**Mob Phone: +91-9611048247; e-mail: colranga@gmail.com**

**Note:**

**(Terms & Conditions as per Industry norms shall apply)**

# ಬೃಹತ್ ಬೆಂಗಳೂರು ಹೋಟಲುಗಳ ಸಂಘ (ರಿ)

## BRUHAT BANGALORE HOTELS ASSOICATION (REGD,)


ಗೌರವಾಧ್ಯಕ್ಷರು
**ಶ್ರೀ ಕೆ.ಉಮೇಶ್ ಶೆಟ್ಟಿ**
ಬಿ.ಬಿ.ಎಂ.ಪಿ. ಸದಸ್ಯರು
ಗೋವಿಂದರಾಜನಗರ ವಾರ್ಡ್
ಮೊ. : 9845844447

ಅಧ್ಯಕ್ಷರು
**ಶ್ರೀ ಚಂದ್ರಶೇಖರ ಹೆಬ್ಬಾರ್.ಬಿ**
ಮೊ: 9845117351

ಉಪಾಧ್ಯಕ್ಷರು
**ಶ್ರೀ ಪಿ.ಸಿ.ರಾವ್**
ಮೊ: 9844494636

ಉಪಾಧ್ಯಕ್ಷರು
**ಶ್ರೀ ಎಂ.ವಿ.ರಾಘವೇಂದ್ರ**
ಮೊ: 9880093264

ಗೌರವ ಕಾರ್ಯದರ್ಶಿ
**ಶ್ರೀ ಸುಬ್ರಮಣ್ಯ ಹೊಳ್ಳ.ಎಸ್**
ಮೊ: 9845042007

ಜಂಟಿ ಕಾರ್ಯದರ್ಶಿ
**ಶ್ರೀ ಚಂದ್ರಹಾಸ.ಎಸ್**
ಮೊ: 9448881200

ಜಂಟಿ ಕಾರ್ಯದರ್ಶಿ
**ಶ್ರೀ ಕೆ.ಬಾಲಚಂದ್ರ ಶೆಟ್ಟಿ**
ಮೊ: 9844006825

ಖಜಾಂಚಿ
**ಶ್ರೀ ವೀರೇಂದ್ರ ಎನ್.ಕಾಮತ್**
ಮೊ: 9845259099


**ಅತಿಥಿ ದೇವೋಭವ–ಜುಲೈ–2018**

## ಮೆನುಕಾರ್ಡ್


| ಕ್ರ. ಸಂ. | ವಿವರ | ಪುಟ ಸಂಖ್ಯೆ |
|---|---|---|
| 1. | ಅಧ್ಯಕ್ಷರ ನುಡಿ | – 4 |
| 2. | ಕಾರ್ಯಕಾರಿಣಿ ಸಭೆ | – 10 |
| 3. | ಕೇಂದ್ರ ಸಚಿವರಿಗೆ ಮನವಿ | – 12 |
| 4. | ಅಧಿಕಾರ ಸ್ವೀಕಾರ | – 13 |
| 5. | ಅಭಿನಂದನೆಯ ಚಿತ್ರಗಳು | – 14 |
| 6. | ಪ್ರತಿಭಾ ಪುರಸ್ಕಾರ | – 15 |
| 7. | ವೇತನದ ಪ್ರಶ್ನೆ | – 16 |
| 8. | ವಿದ್ಯಮಾನ | – 17 |
| 9. | ಪ್ಲಾಸ್ಟಿಕ್ ಕಂಡ್ರೆ ಲೈಸೆನ್ಸ್ ರದ್ದು | – 18 |
| 10. | ಜಾಹೀರಾತು..... | |


**ಅತಿಥಿದೇವೋಭವ ಪತ್ರಿಕೆಗೆ ಜಾಹೀರಾತು ನೀಡಿ**

**ಸಂಘಕ್ಕೆ ಸದಸ್ಯರಾಗಿ ಸಂಘವನ್ನು ಬೆಂಬಲಿಸಿ**



ಬಿ. ಚಂದ್ರಶೇಖರ ಹೆಬ್ಬಾರ್

# ಅಧ್ಯಕ್ಷರ ನುಡಿ

ಸನ್ಮಾನ್ಯ ಹೋಟೆಲು ಉದ್ಯಮ ಬಾಂಧವರೆ,

ಇದೀಗ ನಾನು ಕರ್ನಾಟಕ ಪ್ರದೇಶ ಹೋಟೆಲು ಮತ್ತು ಉಪಾಹಾರ ಮಂದಿರಗಳ ಸಂಘದ ಅಧ್ಯಕ್ಷನಾಗಿ ಮೂರು ವರ್ಷಗಳ ಅವಧಿಗೆ (2018–21)ರ ಅವಧಿಗೆ ಆಯ್ಕೆಯಾಗಿರುವುದು ನಿಮಗೆಲ್ಲ ತಿಳಿದ ವಿಷಯವಾಗಿದೆ. ಆರು ತಿಂಗಳು ತಡವಾಗಿಯಾದರೂ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ನೂತನ ಅಧ್ಯಕ್ಷನಾಗಿ ಅವಿರೋಧವಾಗಿ ಆಯ್ಕೆಯಾಗಿರುವುದು ಸಂಘದ ಒಗ್ಗಟ್ಟಿನ ಮತ್ತು ಸಮಗ್ರತೆಯ ದೃಷ್ಟಿಯಿಂದ ಉತ್ತಮವಾದ ಪ್ರಕ್ರಿಯೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಒಂದೊಮ್ಮೆ ಸ್ಪರ್ಧೆ ನಡೆದರೆ ಅಲ್ಲಿ ಒಂದು ರೀತಿಯ ಭಿನ್ನಮತ, ಅಸಮಾಧಾನದ ವಾತಾವರಣ ಹುಟ್ಟಿಕೊಳ್ಳುತ್ತದೆ. ಅಮತಹ ಯಾವುದೇ ಅಸಮಾಧಾನ, ಅನುಮಾನ, ಗೊಂದಲದ ಸನ್ನಿವೇಶಗಳು ನಿವಾರಣೆಯಾಗುವ ಹಿನ್ನಲೆಯಲ್ಲಿ ಒಮ್ಮತದ ಆಯ್ಕೆಗೇ ಮೊದಲ ಪ್ರಾಶಸ್ತ್ಯ.

ಕೊನೆಯ ಕ್ಷಣದಲ್ಲಿ ಸರ್ವಾನುಮತದ ಆಯ್ಕೆಯಾಗುವುದಕ್ಕಿಂತ ಮೊದಲೇ ಈ ಬಗ್ಗೆ ಮಾತುಕತೆ ಮಾಡಿ ತೀರ್ಮಾನಿಸುವುದು ಒಳ್ಳೆಯದು. ಕೊನೆ ಕ್ಷಣದವರೆಗೂ ಸ್ಪರ್ಧೆಯ ವಾತಾವರಣವಿದ್ದರೆ ಕೆಲವರು ಆ ಕಡೆಯೋ ಈ ಕಡೆಯೋ ಎನ್ನುವಂತಹ ಗೊಂದಲದಲ್ಲಿರುತ್ತಾರೆ. ಸಂಘದ ಶ್ರೇಯಸ್ಸಿನ ನೆಲೆಯಲ್ಲಿ ಇಂತಹ ಗೊಂದಲಕ್ಕೆ ಯವತ್ತೂ ಅವಕಾಶ ನೀಡಬಾರದು. ಸಾಕಷ್ಟು ಮೊದಲೇ ನಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಂಡು ಅವಿರೋಧ ಆಯ್ಕೆಗೆ ಅವಕಾಶ ಸೃಷ್ಟಿಸುವುದು ಒಳ್ಳೆಯದು.

ಸಂಘ ಸಂಸ್ಥೆಗಳಲ್ಲಿ ಕಾರ್ಯಕಾರಿ ಸಮಿತಿಯಲ್ಲಿ, ಪದಾಧಿಕಾರಿಗಳ ಜತೆಯಲ್ಲಿ, ಸಂಘದ ಉದ್ಯಮಪೂರಕವಾದ ಕೆಲಸ ಕಾರ್ಯಗಳಿಗೆ, ಪ್ರಕ್ರಿಯೆಗಳಿಗೆ ಸಹಕಾರ ನೀಡಿದಾಗ ಕೈಜೋಡಿಸಿದಾಗ ನಮಗೆ ಸಂಘದಲ್ಲಿ ಮತ್ತು ಸಮಾಜದಲ್ಲಿ ಗುರುತು, ಗೌರವಗಳು ದೊರೆಯುತ್ತವೆ. ಮುಂದಿನ ದಿನಗಳಲ್ಲಿ ಪದಾಧಿಕಾರಿಗಳಾಗಲು, ನಾಯಕತ್ವದ ನೆಲೆಯಲ್ಲಿ ಕಾಣಿಸಿಕೊಳ್ಳಲು ಸಾಧ್ಯವಾಗುತ್ತದೆ. ಕೆಲಸ ಮಾಡುವವನನ್ನು ಅವಕಾಶ ಹುಡುಕಿಕೊಂಡು ಬರುತ್ತದೆ.

1997ನೇ ಇಸವಿಯಲ್ಲಿ ಬೆಂಗಳೂರು ಹೋಟೆಲುಗಳ ಸಂಘದ ಅಧ್ಯಕ್ಷನಾಗಬೇಕೆಂದು ನಾನು ಕನಸು–ಮನಸಿನಲ್ಲಿಯೂ ಎಣಿಸಿರಲಿಲ್ಲ. ಸಂಘದ ಅಧ್ಯಕ್ಷರಾಗಿದ್ದ ಶ್ರೀ ಕುರಾಡಿ ಗೋವಿಂದ ಕಲ್ಕೂರರು ಗಟ್ಟಿದನಿಯ ಉದ್ಯಮ ಮುಖಂಡರಾಗಿದ್ದರು. ಅವರ ಹಠಾತ್ ನಿಧನದಿಂದ ತೆರವಾದ ಸ್ಥಾನಕ್ಕೆ ಸಮರ್ಥರ ಆಯ್ಕೆಗಾಗಿ ಕಾರ್ಯಕಾರಿ ಸಮಿತಿಯು ಸಭೆ ಸೇರಿ ಚರ್ಚಿಸುತ್ತಿದ್ದಾಗ ಮುಂದೆ ಬಂದ ಹೆಸರೇ ಅಂದು ಉದ್ಯಮರಂಗದಲ್ಲಿ ಹಲವು ಹೋಟೆಲುಗಳನ್ನು ಹೊಂದಿ ಮುಂಚೂಣಿಯಲ್ಲಿದ್ದ ಆಧುನಿಕ ಚಿಂತನೆಯ ಯುವ ಉದ್ಯಮಿ ದಿವಂಗತ ಎ. ಎಸ್. ಕಾಮತರದು. ಅವರ ಅವಿರೋಧ ಆಯ್ಕೆಗೆ ಎಲ್ಲರ ಒಪ್ಪಿಗೆಯೂ ಇತ್ತು. ಎಲ್ಲರೂ ಸೇರಿ ಕಾಮತರನ್ನು ಸಂಘದ ಅಧ್ಯಕ್ಷರಾಗುವಂತೆ ಕೋರಿದಾಗ ಅವರು ನಾನು ಈಗಾಗಲೇ ಹಲವು ಹೋಟೆಲುಗಳ ವ್ಯವಹಾರದ ಒತ್ತಡದಲ್ಲಿದ್ದೇನೆ, ಮುಂದೆಯೂ ಹಲವು ಹೊಸ ಶಾಖೆಗಳ ಸ್ಥಾಪನೆಯ ಯೋಜನೆಯನ್ನು ಹಮ್ಮಿಕೊಂಡಿದ್ದು ಸಂಘದ

ಕೆಲಸಕ್ಕೆ ಸಮಯ ಕೊಡುವುದು ಕಷ್ಟವಾಗುತ್ತದೆ. ಆದ್ದರಿಂದ ನನ್ನ ಬದಲಿಗೆ ಚಂದ್ರಶೇಖರ ಹೆಬ್ಬಾರರನ್ನು ಸಂಘದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಎಂದು ಸಲಹೆ ನೀಡಿದರು.

ಆ ಸಂದರ್ಭದಲ್ಲಿ ನನಗೆ ಸಂಘದ ಪದಾಧಿಕಾರಿಯಾಗುವುದಕ್ಕೆ ಸೂಕ್ತ ತಿಳಿವಳಿಕೆಯಾಗಲೀ ಅನುಭವವಾಗಲೀ ಇರಲಿಲ್ಲ. ಆದರೆ ಎ.ಎಸ್.ಕಾಮತರ ಅಭಿಪ್ರಾಯವನ್ನು ಎಲ್ಲರೂ ಅನುಮೋದಿಸಿದಾಗ ನಾನು ಕಾಮತರಲ್ಲಿ ನೀವು ಸಂಪೂರ್ಣ ಸಹಕಾರ ನೀಡುವುದಿದ್ದರೆ, ಎಲ್ಲರೂ ಮನಃಪೂರ್ವಕ ಬೆಂಬಲಿಸುವುದಿದ್ದರೆ ನನ್ನಿಂದಾದ ಅಖಿಲ ಸೇವೆ ಸಲ್ಲಿಸಲು ಸಿದ್ಧ ಎಂದು ಹೇಳಿದೆ. ಕಾಮತರಾದಿಯಗಿ ಸಭೆಯು ಒಕ್ಕೊರಲಿನಿಂದ ಬೆಂಬಲದ ಭರವಸೆ ನೀಡಿದ ಕಾರಣ ನಾನು ಅಧ್ಯಕ್ಷನಾಗಿ ಅವಿರೋಧವಾಗಿ ಆಯ್ಕೆಯಾದೆ. ಮುಂದಿನ ದಿನಗಳಲ್ಲಿ ಕಾಮತರೂ ತಮ್ಮ ಮಾತು ಉಳಿಸಿಕೊಂಡರು. ಇರುವಷ್ಟು ದಿನ ತನ್ನ ಎಲ್ಲ ರೀತಿಯ ಸಹಾಯ ಸಹಕಾರಗಳನ್ನು ಸಂಘಕ್ಕೆ ಮತ್ತು ನನಗೆ ನೀಡಿದರು. ಸಂಘವು 1999ರಲ್ಲಿ ಕೆ.ಆರ್.ರಸ್ತೆಯ ಕಟ್ಟಡವನ್ನು ಖರೀದಿಸುವ ವೇಳೆ ಅತಿಹೆಚ್ಚಿನ ದೇಣಿಗೆಯನ್ನು ಕೊಟ್ಟದ್ದು ಎ.ಎಸ್.ಕಾಮತರೆನ್ನುವುದು ಸದಾ ಉಲ್ಲೇಖನೀಯ.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯರೂ ಈ ವಿಷಯದಲ್ಲಿ ಹಿಂದುಳಿಯಲಿಲ್ಲ. ಇಂದು ಬೆಂಗಳೂರು ಹೋಟೆಲುಗಳ ಸಂಘವು ಹೊಂದಿರುವ ಕೆ.ಆರ್.ರಸ್ತೆಯ ಕಟ್ಟಡವಾಗಲೀ, ಅಥವಾ ಕನ್ನಹಳ್ಳಿಯ ಕಸತ್ಯಾಜ್ಯ ವಿಲೇವಾರಿಗಾಗಿ ಮಹಾನಗರ ಪಾಲಿಕೆ ನೀಡಿರುವ ನಿವೇಶನವಾಗಲೀ, ಹಾರೋಹಳ್ಳಿಯಲ್ಲಿ ಕೈಗಾರಿಕಾಭಿವೃದ್ಧಿ ಮಂಡಳಿಯವರು ನೀಡಿರುವ ನಿವೇಶನವಾಗಲೀ, ಸಂಘವು ನಡೆಸಿದ ಹೋರಾಟಗಳ ಕೀರ್ತಿಯಾಗಲೀ, ರಾಷ್ಟ್ರಮಟ್ಟದಲ್ಲಿ ಗಳಿಸಿದ ಪ್ರಸಿದ್ಧಿಯಾಗಲೀ, ನಡೆಸುತ್ತಿರುವ ಮಾಸಪತ್ರಿಕೆಯ ಯಶಸ್ಸಾಗಲೀ ಇದೆಲ್ಲಕ್ಕೂ ಸಂಘದ ಕಾರ್ಯಸಮಿತಿ ಸದಸ್ಯರ ಮತ್ತು ನಗರದ ಸಮಸ್ತ ಹೋಟೆಲು ಉದ್ಯಮದಾರರು ನೀಡಿದ ಬೆಂಬಲ ಸಹಕಾರಗಳೇ ಕಾರಣ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

2001ರಲ್ಲಿ ಸಂಘದ ನೂತನ ಕಾರ್ಯಾಲಯ ಪ್ರಾರಂಭವಾಯಿತು. ಈ ವೇಳೆಯೂ ಕಾಮತರು ನನ್ನ ಜತೆಗಿದ್ದರು. ಈ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಅನೇಕ ಮಹನೀಯರನ್ನು ಸನ್ಮಾನಿಸುವ ಅವಕಾಶ ನನಗೆ ಸಿಕ್ಕಿತು. ಅಂದು ಗೃಹ ಮಂತ್ರಿಗಳಾಗಿದ್ದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ನಮ್ಮ ಸಂಘದ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಕಾರ್ಯಕ್ರಮ ಚೆನ್ನಾಗಿ ನಡೆಯಿತು. ಮುಂದೆ ಪ್ರತಿ ಮೂರು ವರ್ಷಕ್ಕೊಮ್ಮೆ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರ ಅಯ್ಕೆಗಾಗಿ ಚುನಾವಣೆ ನಡೆಯುವುದು ಪದ್ಧತಿಯಾಯಿತು. ಸತತ ಮೂರು ಅವಧಿಗಳಿಗೆ(1997–2007ರ ವರೆಗೆ) ನಾನು ಅಧ್ಯಕ್ಷನಾಗಿ ಮುಂದುವರಿದೆ. ಈ ಸಂದರ್ಭದಲ್ಲಿ ಸಹಕಾರ ಕೊಟ್ಟ ಎಲ್ಲ ಕಾರ್ಯಕಾರಿ ಸಮಿತಿ ಸದಸ್ಯರನ್ನು ನಾನು ಮತ್ತೊಮ್ಮೆ ಸ್ಮರಿಸುತ್ತೇನೆ.

ಈ ಅವಧಿಯಲ್ಲಿ ಹೋಟೆಲು ಉದ್ಯಮದಾರರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಸರಕಾರದ ವಿವಿಧ ಇಲಾಖೆಗಳ ಅದಿಕಾರಿಗಳು ಮತ್ತು ಮಂತ್ರಿಗಳನ್ನು ಭೇಟಿಯಾಗುವ ಬೆಂಗಳೂರು ಮಹಾನಗರಪಾಲಿಕೆಗೆ ಸಂಬಂಧಿಸಿದ ಹೋಟೆಲು ಉದ್ಯಮದ ಸಮಸ್ಯೆಗಳನ್ನು ಪಾಲಿಕೆಯ ಆಯುಕ್ತರು ಮತ್ತು ಮೇಯರ್ ಅವರ ಮುಂದೆ ಪ್ರತಿನಿಧಿಸುವ ಅವಕಾಶ ದೊರೆಯಿತು.

ಸಂಘದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸುವುದಕ್ಕೂ ಇದೇ ಸಂದರ್ಭದಲ್ಲಿ ನಾಂದಿ ಹಾಡಲಾಯಿತು. ಸಂಘಕ್ಕೆ ಸದಸ್ಯರ ಮಾದಸಿಕ ವಂತಿಗೆಯನ್ನು ಕಡ್ಡಾಯಗೊಳಿಸುವ ಮೂಲಕ ಪ್ರತಿಯೊಬ್ಬ ಸದಸ್ಯನೂ ಸಂಘದ ಬಗ್ಗೆ ಜವಾಬ್ದಾರಿ ಹೊಂದುವಂತೆ ಮತ್ತು ಸತತ ಸಂಪರ್ಕ ಹೊಂದುವಂತೆ ಅವಕಾಶ ಕಲ್ಪಿಸಲಾಯಿತು.

ಮುಂದಿನ ದಿನಗಳಲ್ಲಿ ಸಂಘವು ಹೋಟೆಲು ಉದ್ಯಮದಾರರ ಕಷ್ಟಕೋಟಲೆಗಳಿಗೆ, ಸಮಸ್ಯೆಗಳ ಪರಿಹಾರಕ್ಕೆ ಸ್ಪಂದಿಸಿದ ರೀತಿಯನ್ನು ಹೋಟೆಲು ಉದ್ಯಮದಾರರು ಮೆಚ್ಚಿಕೊಂಡರೆನ್ನುವ ರೀತಿಯಲ್ಲಿ ಸಂಘಕ್ಕೆ ಸದಸ್ಯರ ಸಂಖ್ಯೆ ಏರಿಕೆಯಾಗ ತೊಡಗಿತು. ಕೆಲವೇ ನೂರರಷ್ಟಿದ್ದ ಸದಸ್ಯರ ಸಂಖ್ಯೆ ಸಾವಿರದ ಗಡಿ ಮುಟ್ಟಿತು. ದೇಶದಲ್ಲಿಯೇ ಹೋಟೆಡಲು ಉದ್ಯಮದಾರರ ಬಹುದೊಡ್ಡ ಸಂಘವೆಂಬ ಕೀರ್ತಿ ಬೆಂಗಳೂರು ಹೋಟೆಲು ಸಂಘದ್ದಾಯಿತು. ಜಾತಿ, ಮತ,ಪಂಥಗಳ ಮೇರೆ ಮಿತಿಗಳನ್ನು ಮೀರಿ ಸಂಘಕ್ಕೆ ಹಿಂದೂ, ಕ್ರೈಸ್ತ ಮತ್ತು ಮುಸಲ್ಮಾನ ಮುಂತಾಗಿ ಬೇರೆ ಬೇರೆ ಧರ್ಮಗಳ ಹೋಟೆಲು ಉದ್ಯಮದಾರರೂ ಸದಸ್ಯರಾದರು.

ಸರಕಾರವು ಹೋಟೆಲು ಉದ್ಯಮಕ್ಕೆ ಸಂಬಂಧಿಸಿದಂತೆ ಯಾವುದೇ ಕಾನೂನು ಕಾಯಿದೆ ತರುವುದಿದ್ದರೂ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ನಾವು ಚರ್ಚಿಸಿ ಹೋಟೆಲು ಉದ್ಯಮದಾರರಿಗೆ ತೊಂದರೆಯಾಗುವುದಿದ್ದರೆ ಅದನ್ನು ಸರಕಾರದ ಸಂಬಂಧಿತ ಅಧಿಕಾರಿಗಳು ಮತ್ತು ಮಂತ್ರಿಗಳ ಗಮನಕ್ಕೆ ತಂದು ಪ್ರಯೋಜನ ಪಡೆದ ಉದಾಹರಣೆಗಳು ಅನೇಕವಿವೆ.

ಅನಂತರ ನಾನು ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸಲು ಇಚ್ಚಿಸಿ ಯುವ ಉದ್ಯಮಿಯಾಗಿದ್ದ ಶ್ರೀ ವಾಸುದೇವ ಅಡಿಗರನ್ನು ಅಧ್ಯಕ್ಷರನ್ನಾಗಿಸಲು ಸಹಕಾರ ನೀಡಬೇಕೆಂದು ಕೋರಿದಾಗ ಅದಕ್ಕೂ ಸರ್ವಾನುಮತದಿಂದ ಸಭೆ ಬೆಂಬಲ ನೀಡಿದ್ದು ಗಮನೀಯ ಸಂಗತಿ. ಮುಂದಿನ ಆರು ವರ್ಷಗಳ ಕಾಲ ಸಂಘವನ್ನು ವಾಸುದೇವ ಅಡಿಗರು ಸಮರ್ಥವಾಗಿ ಮುನ್ನಡೆಸಿದರು. ಅವರ ನೇತೃತ್ವದಲ್ಲಿ ನಡೆದ ಸಂಘದ ಅಮೃತ ಮಹೋತ್ಸವ ಆಚರಣೆಯ ವೇಳೆ ಸಮಿತಿಯ ಸಂಚಾಲಕನಾಗಿದ್ದು ನಾನು ನನ್ನಿಂದಾದ ಸೇವೆ ಸಲ್ಲಿಸಿದೆ. ಎಲ್ಲರ ಸಹಕಾರದಿಂದ ಅಮೃತ ಮಹೋತ್ಸವ ಅದ್ದೂರಿಯಾಗಿ ನಡೆಯಿತು. ಇದಲ್ಲದೆಯೂ ಸಂಘದ ಎಲ್ಲ ಚಟುವಟಿಕೆಗಳಿಗೂ ನಾನು ನನ್ನ ಸಂಪೂರ್ಣ ಸಹಕಾರ ನೀಡಿದ್ದೇನೆ.

ಮುಂದೆ 2013ರಲ್ಲಿ ವಾಸುದೇವ ಅಡಿಗರು ತಾನು ಅಧ್ಯಕ್ಷನಾಗಿ ಮುಂದುವರೆಯುವುದಿಲ್ಲ, ನೀವೇ ಮತ್ತೆ ಅಧ್ಯಕ್ಷರಾಗಿ ಎಂದು ಹೇಳಿದಾಗ ಸಂಘದ ಕಾರ್ಯಕಾರಿ ಸಮಿತಿಯೂ ಬೆಂಬಲ ನೀಡಿದ ಕಾರಣ ಅಂದಿನಿಂದ ಇಂದಿನ ವರೆಗೂ ಸಂಘದ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಿದ್ದೇನೆ.

ಕಳೆದ ಐದು ವರ್ಷಗಳಲ್ಲಿ ನಮ್ಮ ಉದ್ಯಮಕ್ಕೆ ಸಂಬಂಧಿಸಿದ ಹಲವಾರು ಸಮಸ್ಯೆಗಳು ಎದುರಾದವು. ಪ್ರಮುಖವಾದದ್ದು ಜಿಎಸ್‌ಟಿ ಮತ್ತು ಆಹಾರ ಸುರಕ್ಷಾ ಕಾಯಿದೆ.

ಆಹಾರ ಸುರಕ್ಷಾ ಕರಯಿದೆ ವಿಚಾರದಲ್ಲಿ ಕೆಪಿಹೆಚ್‌ಆರ್‌ಎ ಮತ್ತು ಬಿಬಿಹೆಚ್‌ಎ ಸಂಗಗಳು ಜಂಟಿಯಾಗಿ ಕಾನೂನು ಹೋರಾಟ ನಡೆಸುತ್ತಿದ್ದು, ದೇಸದಲ್ಲಿಯೆ ಕರ್ನಾಟಕದಲ್ಲಿ ಮಾತ್ರ ಈ ಕಾಯಿದೆಯ ಜಾರಿಗೆ ಹೈಕೋರ್ಟು ತಡೆಯಾಜ್ಞೆ ನೀಡಿರುವುದು ನಮ್ಮ ಸಂಘಟಿತ ಹೋರಾಟಕ್ಕೆ ಸಂದ ಜಯವೆಂದೇ ಹೇಳಬೇಕು.

ಬೇರೆ ರಾಜ್ಯಗಳಲ್ಲಿ ಕಾಯಿದೆ ಜಾರಿಯಲ್ಲಿರುವ ಪ್ರದೇಶಗಳಲ್ಲಿ ಹೋಟೆಲು ಉದ್ಯಮದ ವಿರುದ್ಧ ಗ್ರಾಹಕರು ಈ ಕಾಯಿದೆಯನ್ನು ದುರುಪಯೋಗಪಡಿಸಿಕೊಂಡ ಉದಾಹರಣೆಗಳು ಬೇಕಾದಷ್ಟಿವೆ. ಇದರಿಂದ ಹೋಟೆಲು ಮಾಲೀಕರು ಬಹಳ ಕಿರುಕುಳ ಅನುಭವಿಸಬೇಕಾಗಿ ಬಂದಿದೆ. ಮುಂದಿನ ದಿನಗಳಲ್ಲಿ ಈ ಕಾಯಿದೆಯ ಬಗ್ಗೆ ಕೋರ್ಟಿನ ತೀರ್ಪು ಪ್ರಕಟವಾಗುವ ಸಾಧ್ಯತೆಯೂ ಇದೆ. ಆದರೆ ಇದರಿಂದ ಹೋಟೆಲು ಉದ್ಯಮಕ್ಕಾಗುವ ಸಮಸ್ಯೆಗಳ ಬಗ್ಗೆ ನಾವು ಸತತವಾಗಿ ಕೇಂದ್ರ ಸರಕಾರದ ಸಂಬಂಧಿತ ಇಲಾಖೆಗಳ ಸತತ ಸಂಪರ್ಕದಲ್ಲಿ ಇದ್ದೇವೆ.

ಆಹಾರ ಸುರಕ್ಷಾ ಕಾಯಿದೆ ನಮ್ಮ ಉದ್ಯಮಕ್ಕೆ ಮರಕ, ಆದರೆ ಆ ಕಾಯಿದೆಯನ್ನು ಜಾರಿ ಮಡಬಾರದೆಂದು ಹೇಳುವ ಸ್ಥಿತಿಯಲ್ಲಿ ನಾವಿಲ್ಲ. ಹಾಗೆಂದು ಅದನ್ನು ಜಾರತಿ ಮಾಡಿದಲ್ಲಿ ಬೀದಿ ಬದಿಯಲ್ಲಿ ಯಾವುದೇ ಕಾಯಿದೆ, ಕಾನೂನಿಗೊಳಪಡದೆ ವ್ಯಾಪಾರ ಅನಧಿಕೃತ ತಿಂಡಿತಿನಿಸಿನ ವ್ಯಾಪಾರಿಗಳೊಂದಿಗೆ ಸ್ಪರ್ಧಿಸುವ ಅನಿವಾರ್ಯ ಪರಿಸ್ಥಿತಿ ನಮ್ಮದು. ಹಲವು ಕಟ್ಟುಪಾಡುಗಳಿಗೊಳಪಟ್ಟು ಬಂಧನಗಳೇ ಇಲ್ಲದವರೊಂದಿಗೆ ಸ್ಪರ್ಧೆ ಮಾಡುವುದು ಹೇಗೆ? ಎನ್ನುವುದು ನಮ್ಮೆದುರಿರುವ ಯಕ್ಷಪ್ರಶ್ನೆ. ಸರಕಾರಕಜ್ಕಾಗಲೀ ನ್ಯಾಯಾಲಯಕ್ಕಾಗಲೀ ಇದು ಅರ್ಥವಾಗುವುದಿಲ್ಲ ಎನ್ನುವುದು ನಮ್ಮ ದುರದೃಷ್ಟ. ಆದರೆ  ನಮ್ಮ ಪ್ರಯತ್ನ ಮುಂದುವರಿದಿದೆ.

ಜಿಎಸ್‌ಟಿ ವಿಚಾರವಾಗಿ ಈಗಾಗಲೇ ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಪರವಾಗಿ ನಮ್ಮ ಖರ್ಚಿನಲ್ಲೇ ಹಲವಾರು ಬಾರಿ ದೆಹಲಿಗೆ ಹೋಗಿ ಮಂತ್ರಿಗಳನ್ನು ಮತ್ತು ಅಧಿಕಾರತಿಗಳನ್ನು ಭೇಟಿ ಮಾಡಿ ಮನವಿಗಳ ಮೇಲೆ ಮನವಿಗಳನ್ನು ಸಲ್ಲಿಸಿ ಒತ್ತಡ ತಂದ ಕಾರಣ ಶೇ.18, ಶೇ. 12 ಇದ್ದ ತೆರಿಗೆಯು ಶೇ. 5ಕ್ಕೆ ಬಂದು ನಿಂತಿದೆ. ಕೇವಲ ಒಂದು ಜಿಲ್ಲಾ ಸಂಘದ ಶ್ರಮದಿಂದ ದೇಶದ ಎಲ್ಲ ಹೋಟೆಲು ಉದ್ಯಮದಾರರೂ ನಿಟ್ಟುಸಿರು ಬಿಡುವಂತಾಗಿದೆ. ನಿರಾಳವಾಗುವಂತಾಗಿದೆ.

ಇದೇ ರೀತಿಯಾಗಿ ಈ ಎರಡು ದಶಕಗಳಲ್ಲಿ ಹೋಟೆಲು ಉದ್ಯಮದ ಪರವಾಗಿ ಕೆಲಸ ಮಾಡಲು ನನಗೆ ಅನೇಕ ಅವಕಾಶಗಳು ಸಿಕ್ಕಿವೆ. ಪತ್ರಿಕಾ ಮಾದ್ಯಮ ಮತ್ತು ವಿದ್ಯುನ್ಮಾನ ಮಾಧ್ಯಮದ ಪತ್ರಕರ್ತರು ಸಾಕಷ್ಟು ಸಹಕಾರ ನೀಡಿದ್ದಾರೆ. ಬೆಂಗಳೂರಿನಲ್ಲಿ 83 ವರ್ಷಗಳ ಹೋಟೆಲು ಉದ್ಯಮ ಸಂಘಟನೆಯ ಇತಿಹಾಸದಲ್ಲಿ ಪ್ರಥಮ ಬಾರಿಗೆ ಜಿಎಸ್‌ಟಿ ವಿಚಾರದಲ್ಲಿ ಸಂಪೂರ್ಣವಾಗಿ ಹೋಟೆಲು ಉದ್ಯಮ ಬಂದ್ ಆಚರಿಸಲು ನೀಡಿದ ಕರೆ ಯಶಸ್ವಿಯಾದದ್ದು ಉದ್ಯಮದಾರರು ಮತ್ತು ಮಾಧ್ಯಮದ ಮಂದಿ ನೀಡಿದ ಸಹಕಾರದಿಂದಲೇ. ಈ ಒಂದು ಘಟನೆಯಿಂದ ನಮ್ಮ ಸಂಘದ ಹೆಸರನ್ನು  ರಾಷ್ಟ್ರ ಮಟ್ಟದಲ್ಲಿ ಗುರುತಿಸುವಂತಹ ಕೆಲಸ ಆಯಿತೆಂದೇ ಹೇಳಬಹುದಾಗಿದೆ. ಈ ಹೋರಾಟದಿಂದಲೇ ಹೋಟೆಲು ಉದ್ಯಮದ ಮೇಲಿನ ಜಿ.ಎಸ್.ಟಿ. ಇಳಿಯಿತೆನ್ನುವುದು ಗಮನೀಯ.

ಒಂದು ಸಂಘವು ಕೆಲಸ ಮಾಡಬೇಕಾದರೆ ಅದಕ್ಕೆ ಸರಿಯಾದ ನಾಯಕತ್ವ ಇರಬೇಕು. ನಾಯಕನಾದವನು ಹಾಗೂ ಪದಾಧಿಕಾರಿಗಳಾದವರು ಸ್ವಂತ ಕೆಲಸ ಬಿಟ್ಟು ಸಂಘದ ಕೆಲಸಕ್ಕೆ ಪ್ರಾಧಾನ್ಯ ನೀಡಿದರೆ ಮಾತ್ರ ಸಂಘವು ಸದಸ್ಯರ ಹಿತ ಕಾಯುವಲ್ಲಿ ಯಶಸ್ವಿಯಾಗುತ್ತದೆ. ಅಂತಹ ಕಾರ್ಯಸಮರ್ಥರು ಮಾತ್ರ ಸಂಘದ ಪದಾಧಿಕಾರಿಗಳಾಗಲು ಮತ್ತು ಮುಖಂಡರೆನಿಸಿಕೊಳ್ಳಲು ಅರ್ಹರೆನಿಸಿಕೊಳ್ಳುತ್ತಾರೆ. ನಾನಿದ್ದರೇ ಸಂಘವೆನ್ನುವ ಭಾವನೆ ಯಾರಲ್ಲಿಯೂ ಬರಬಾರದು. ನನ್ನ ಉದ್ದಿಮೆ ಮತ್ತು ಉದ್ಯಮದಲ್ಲಿ ನನ್ನ ಅಭಿವೃದ್ಧಿ ಎನ್ನುವ ಭಾವನೆ ಸಂಘಜೀವನಕ್ಕೆ

ಹೊಂದಾಣಿಕೆಯಾಗುವುದಿಲ್ಲ. ಸಂಘದ ಅಭಿವೃದ್ಧಿಯಿಂದ ಉದ್ದಿಮೆದಾರರಿಗೆ ಅನುಕೂಲವಾಗುತ್ತದೆ. ಹಾಗಾಗಿ ಮುಂದಿನಗಳಲ್ಲಿ ಯಾರೇ ಆಗಲಿ ಸಂಘದ ಸಭೆಗಳಲ್ಲಿ ಭಾಗವಹಿಸಿ ಕಾರ್ಯಚಟುವಟಿಕೆಗಳಿಗೆ ಸಹಕಾರ ನೀಡಿ, ಕಾರ್ಯಸಮಿತಿ ಸದಸ್ಯರಾಗಿ, ಪದಾಧಿಕಾರಿಗಳಾಗಿ ಸಂಘಕ್ಕೆ, ಉದ್ಯಮರಂಗಕ್ಕೆ ಸೇವೆ ಸಲ್ಲಿಸಿದರೂ ಅವರ ಕೊಡುಗೆ ಸಂಘಕ್ಕೆ ಮತ್ತು ಉದ್ಯಮದಾರರಿಗೆ ಸ್ಮರಣೀಯವಾಗುತ್ತದೆ. ಅಂಥಹ ಸಮಾಜಸೇವಕರನ್ನು, ಕೊಡುಗೈ ದಾನಿಗಳನ್ನು ಜನರು ಗುರುತಿಸುತ್ತಾರೆ. ಗುರುತಿಸಬೇಕು ಎನ್ನುವುದೂ ಅಪೇಕ್ಷಣೀಯ.

ಮಾನವ ಧರ್ಮದಲ್ಲಿ ಉಪಕಾರ ಮಾಡಿದವರಿಗೆ ಪ್ರತ್ಯುಪಕಾರ ಮಾಡುವುದೇ ಕೃತಜ್ಞತೆ, ಋಣಪರಿಹಾರ ಅಂತ ಹೇಳುತ್ತಾರೆ. ಹಾಗೆ ಋಣಸಂದಾಯ ಮಾಡದಿದ್ದರೆ, ಅನುಕೂಲ ಇದ್ದೂ ಸಹಕಾರ ನೀಡದಿದ್ದರೆ ಅಂತಹ ಕೃತಘ್ನರು ಬೇರೆ ಇರುವುದಿಲ್ಲ. ಇದನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕು. ಈ ರೀತಿಯಾಗಿ ನನು ಹೇಳುವುದು ಬಹಳ ಜನರಲ್ಲಿ ಬೇಸರ ಮೂಡಿಸಬಹುದು. ನಮ್ಮ ಸಂಘದಲ್ಲಿ ಸಾವಿರಾರು ಸದಸ್ಯರಿದ್ದಾರೆ ಆದರೆ ಸಂಘದ ಕೆಲಸಕ್ಕೆ ಕೈಜೋಡಿಸುವ ಮಂದಿ ಕೇವಲ ಶೇ.15ರಷ್ಟು ಮಾತ್ರ. ಇದು ನಾಚಿಗೆಯ ಸಂಗತಿ ಎನ್ನುವುದನ್ನು ಎಲ್ಲ ಉದ್ಯಮದಾರರೂ ತಿಳಿಯಬೇಕು.

ಸಂಘದ ಅಧ್ಯಕ್ಷರಾದರೆ ವರ್ಷಕ್ಕೊಮ್ಮೆ ಸರ್ವಸದಸ್ಯರ ಸಭೆ ನಡೆಸಿ ಊಟ ಹಾಕಿಸಿದರೆ ಸಾಕಾಗುತ್ತದೆ. ಆದರೆ ನನು ಈ ವರೆಗಿನ ಯಾವುದೇ ಅವಧಿಯಲ್ಲೂ ಬೆಂಗಳೂರು ಸಂಘದ ಅಧಿಕಾರಾವಧಿಯಲ್ಲಿ ಹಾಗೆ ಕೇವಲ ಊಟ ಹಾಕಿ ಕಳುಹಿಸುವ ಮೂಲಕ ಕಾರ್ಯಕ್ರಮ ಮುಗಿಸಿದ್ದಿಲ್ಲ. ಸಂಘದ ಮೂಲಕ ಹೋಟೆಲು ಉದ್ಯಮದಾರರಿಗೆ ಏನೇನು ಪ್ರಯೋಜನ ಒದಗಿಸಬಹುದೋ, ಸಂಘದ ಉದ್ದೇಶವು ಸಾರ್ಥಕವಾಗಲು ಏನೇನು ಮಡಬಹುದೋ ಅದೆಲ್ಲ ಪ್ರಯತ್ನಗಳನ್ನೂ ಮಾಡಿದ್ದೇನೆರ. ಹಗೆ ಕೆಲಸ ಮಾಡಿದ ಕಾರಣ ಈ ನಿರ್ಗಮನದ ಹೊತ್ತಿನಲ್ಲಿ ಸಂಘದಸದಸ್ಯರು ನನ್ನ ಮೇಲಿಟ್ಟ ವಿಶ್ವಾಸವನ್ನು ನಾನು ಉಳಿಸಿಕೊಂಡಿದ್ದೇನೆ ಎಂಬ ತೃಪ್ತಿ ನನ್ನದಾಗಿದೆ.

ಈ ವರೆಗೆ ಸಂಘದ ಅಧ್ಯಕ್ಷನಾಗಿ ಕೆಲಸ ಮಾಡಲು ಸಹಕಾರ ನೀಡಿದ ಎಲ್ಲ ಪದಾಧಿಕಾರಿಗಳು, ಹಿರಿಯ ಕಿರಿಯ ಹೋಟೆಲು ಉದ್ಯಮದಾರರು, ಕಾರ್ಯಕಾರಿ ಸಮಿತಿ ಸದಸ್ಯರು, ಸಂಘದ ಕಾರ್ಯಾಲಯದ ಸಿಬ್ಬಂದಿಗಳು, ಮಿತ್ರರು, ಹಿತೈಷಿಗಳು ಎಲ್ಲರಿಗೂ ನಾನು ಆಭಾರಿಯಾಗಿದ್ದೇನೆ.

ಒಬ್ಬ ಯಶಸ್ವಿಯಾದಾಗ ಅವನ ಜತೆ ಅನೇಕರು ಇರುತ್ತಾರೆ. ಆದರೆ ಕೈಸೋತಾಗ ಯಾರೂ ಇರುವುದಿಲ್ಲ ಇದು ಲೋಕ ರೂಢಿ. ಕೆಲಸ ಮಾಡದೇ ಹೋದಾಗ ಯಾರಾದರೂ ಟೀಕಿಸುವುದು ಸಹಜ. ಆದರೆ ಮಾಡಿದ ನೂರು ಕೆಲಗಳಲ್ಲಿ 95 ಯಶಸ್ವಿಯಾಗಿ 5ರಲ್ಲಿ ವಿಫಲವಾದರೂ ಸಫಲವಾದದ್ದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸದೆ, ವಿಫಲವಾದ 5ರ ಬಗ್ಗೆ ಎತ್ತಿ ಆಡುವ ಜನ ಬಹಳವಿದ್ದಾರೆ.

ಬೃಹತ್ ಬೆಂಗಳುರು ಹೋಟೆಲುಗಳ ಸಂಘಕ್ಕೆ ಗೌರವಾಧ್ಯಕ್ಷರಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರಾದ ಶ್ರೀ ಉಮೇಶ್ ಶೆಟ್ಟರನ್ನು ಆಯ್ಕೆ ಮಾಡುವ ಮೂಲಕ ನಾವು ಸರಿಯಾದ ಕೆಲಸವನ್ನೇ ಮಾಡಿದ್ದೇವೆ. ಅವರಿಂದಾಗಿ ಪಾಲಿಕೆಯಲ್ಲಿ ನಮ್ಮ ಕೆಲಸಗಳು ಸಲೀಸಾಗಿ ನಡೆಯಲು ಸಾಧ್ಯವಾಗಿದೆ. ನಮ್ಮ ಎಲ್ಲ ಕಾರ್ಯಚಟುವಟಿಕೆಗಳಿಗೂ ಬೆಂಬಲವಾಗಿ ತಾನಿದ್ದೇನೆ ಎಂಬ ಭರವಸೆಯನ್ನು ನೀಡಿರುವ ಶ್ರೀ ಉಮೇಶ ಶೆಟ್ಟರಿಗೆ ನನ್ನ ವೈಯಕ್ತಿಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ನಾನು ಕೆಪಿಹೆಚ್‌ಆರ್‌ಎ ಅಧ್ಯಕ್ಷನಾಗಿ ಆಯ್ಕೆಯಾಗಿರುವ ಕಾರಣ ಈ ಸಂಘದ ಅಧ್ಯಕ್ಷ ಪದವಿಯನ್ನು ತೊರೆಯಲೇ ಬೇಕಾಗಿದೆ. ಮುಂದೆ ನೂತನ ಸಮರ್ಥ ಅಧ್ಯಕ್ಷರನ್ನು ಕಾರ್ಯಕಾರಿ ಸಮಿತಿಯು ಆಯ್ಕೆ ಮಾಡಲಿದೆ. ನೂತನವಾಗಿ ಆಯ್ಕೆಯಾಗುವ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಹಿಂದಿನಂತೆಯೇ ನನ್ನ ಸಹಕಾರವನ್ನು ವೈಯಕ್ತಿಕವಾಗಿ ಮತ್ತು ಕೆಪಿಹೆಚ್‌ಆರ್‌ಎ ಕಡೆಯಿಂದಲೂ ಒದಗಿಸುವ ಭರವಸೆ ನೀಡುತ್ತಿದ್ದೇನೆ. ಅದೇ ರೀತಿ ಎಲ್ಲ ಸದಸ್ಯ ಬಂಧುಗಳೂ ಹಿಂದಿನಂತೆಯೇ ಸಂಘದ ಕೆಲಸ ಕಾರ್ಯಗಳಿಗೆ ಸಹಾಯ ಸಹಕಾರಗಳನ್ನು ಮುಂದುವರಿಸಬೇಕೆಂದು ವಿನಂತಿ ಮಾಡುತ್ತೇನೆ.


ಸಂಘದ ಬಲವರ್ಧನೆಗೆ ಮತ್ತು ಹೋಟೆಲು ಉದ್ಯಮದ ಸಮಸ್ಯೆಗಳ ನಿವಾರಣೆಗೆ ಹಾಗೂ ಉದ್ಯಮದ ಏಳಿಗೆಗೆ ಎಲ್ಲರ ಸಹಕಾರವಿರಲಿ ಎಂದು ಆಶಿಸುತ್ತಾ ನನ್ನ ಮಾತುಗಳಿಗೆ ಪೂರ್ಣವಿರಾಮ ಹಾಕುತ್ತೇನೆ.

ವಂದನೆಗಳು.

**ಸಮಸ್ತ ಹೋಟೆಲು ಉದ್ಯಮದಾರರು**
**ಸಂಘದ ಸದಸ್ಯರಾಗಿ ಸಂಘವನ್ನು ಬಲಗೊಳಿಸಿ**
**ಬೆಳೆಸಿ ಉದ್ಯಮವನ್ನು ಪ್ರಗತಿ ಪಥದಲ್ಲಿ ಮುನ್ನಡೆಸಲು**
**ಕೈಗೂಡಿಸಬೇಕೆಂದು ನಮ್ರವಿನಂತಿ.**

ಶುಭಾಶಯಗಳೊಂದಿಗೆ

ಜಾಹೀರಾತು



# ಹೋಟೆಲ್ ದ್ವಾರಕಾ

**ಆನಂದರಾವ್ ಸರ್ಕಲ್, ಬೆಂಗಳೂರು–560 009**

ಉದ್ಯಾನ ನಗರಿಯ ಮಧ್ಯದಲ್ಲಿ ಹೆಸರಾಂತ ಆನಂದರಾವ್ ವೃತ್ತದ ಅಂಚಿನಲ್ಲಿ ರೈಲ್ವೆ,
ಸಾರಿಗೆ ನಿಲ್ದಾಣಗಳ ಸಮೀಪದಲ್ಲಿ, ವಿವಿಧ ಕಛೇರಿ, ಕೋರ್ಟುಗಳ ಸನಿಹದಲ್ಲಿ
ವ್ಯಾಪಾರ ವಹಿವಾಟು ಕೇಂದ್ರಗಳ ಸಾನಿಧ್ಯದಲ್ಲಿ ರಾರಾಜಿಸುವ
ನಿಮ್ಮ ಕುಟುಂಬದವರ ಅಚ್ಚುಮೆಚ್ಚಿನ ಮೆಚ್ಚುಗೆಯ ವಸತಿ ಗೃಹ.

**ನಮ್ಮ ವಿಶೇಷತೆಗಳು**

ಸಕಲ ಸೌಲಭ್ಯಗಳನ್ನೊಳಗೊಂಡ, ಉತ್ತಮ ಗಾಳಿ–ಬೆಳಕಿರುವ, ನಿರಂತರ ನೀರು
ವಿದ್ಯುತ್ ಸರಬರಾಜಿರುವ, ಅತಿ ಹೆಚ್ಚಿಲ್ಲದ ಬಾಡಿಗೆಯಿರುವ ವಿಶಾಲವಾದ ಕೊಠಡಿಗಳು,
ಮನಸ್ಸಿಗೆ ಶಾಂತಿ, ನೆಮ್ಮದಿ ತರುವ ಶಾಂತ ವಾತಾವರಣ, ನಮ್ರತೆಯ ಸೇವೆ
ಎಸ್.ಟಿ.ಡಿ. / ಐ.ಎಸ್.ಡಿ. ಮತ್ತು ಕಾರು ನಿಲ್ಲಿಸಲು ಅನುಕೂಲತೆ ಇತ್ಯಾದಿ......

ಎನ್.ಆರ್. ನಾರಾಯಣರಾವ್
ಮೇನೆಜಿಂಗ್ ಡೈರೆಕ್ಟರ್

ದೂರವಾಣಿ : 22265011 (8 ಮಾರ್ಗಗಳು) 2226 8263, 2226 8264

# ಬಿಬಿಹೆಚ್‌ಎ ಮಾಸಿಕ ಕಾರ್ಯಕಾರಿ ಸಮಿತಿ ಸಭೆ



ಬೆಂಗಳೂರು: ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಜೂನ್ ತಿಂಗಳ ಕಾರ್ಯಕಾರಿ ಸಮಿತಿಯ ಸಭೆಯು 26.06.2018ರಂದು, ಕೆ. ಆರ್. ರಸ್ತೆಯಲ್ಲಿರುವ ಸಂಘದ ಕಛೇರಿಯಲ್ಲಿ ನಡೆಯಿತು. ಸಂಘದ ಅಧ್ಯಕ್ಷರಾದ ಶ್ರೀ ಬಿ. ಚಂದ್ರಶೇಖರ ಹೆಬ್ಬಾರ್‌ರವರು ಅಧ್ಯಕ್ಷತೆ ವಹಿಸಿದ್ದರು. ಜಂಟಿ ಕಾರ್ಯದರ್ಶಿಗಳಾದ ಶ್ರೀ ಎಸ್.ಚಂದ್ರಹಾಸರವರು ಸಭೆಗೆ ಬಂದಿರುವ ಅತಿಥಿಗಳನ್ನು ಕಾರ್ಯಕಾರಿ ಸಮಿತಿಯ ಸದಸ್ಯರನ್ನು, ವಿಶೇಷ ಆಹ್ವಾನಿತರನ್ನು ಹಾಗೂ ಭವಿಷ್ಯನಿಧಿ ಅನುಷ್ಠಾನ ಅಧಿಕಾರಿಯನ್ನು ಸ್ವಾಗತಿಸಿದರು.

ಅಧ್ಯಕ್ಷರಾದ ಬಿ. ಚಂದ್ರಶೇಖರ ಹೆಬ್ಬಾರ್‌ರವರು ಮಾತನಾಡುತ್ತಾ ಭವಿಷ್ಯ ನಿಧಿ ಕಛೇರಿಯಿಂದ ಆಗಮಿಸಿದ್ದ, ಎನ್‌ಫೋರ್ಸ್‌ಮೆಂಟ್ ಅಧಿಕಾರಿಯಾದ ಶ್ರೀನಿಧಿರವರನ್ನು ಭವಿಷ್ಯ ನಿಧಿಗೆ ಸಂಬಂಧಿಸಿದಂತೆ ಇತ್ತೀಚೆಗೆಆಗಿರುವ ಬದಲಾವಣೆಗಳ ಕುರಿತು ಸಭೆಯಲ್ಲಿ ಮಾತನಾಡಲು ತಿಳಿಸಿದರು.

ಭವಿಷ್ಯನಿಧಿ ಅಧಿಕಾರಿಗಳು ಮಾತನಾಡಿ, ಇಲಾಖೆಯಲ್ಲಿ ಎಲ್ಲ ವ್ಯವಹಾರಗಳನ್ನು ಗಣಕೀಕರಣಗೊಳಿಸುತ್ತಿದ್ದು, ಯಾವುದೇ ಕಾಗದಪತ್ರಗಳ ಅವಶ್ಯಕತೆ ಇಲ್ಲದೇ ಹೋಟೆಲು ಕಾರ್ಮಿಕರ ಭವಿಷ್ಯ ನಿಧಿಯ ವಿವರಗಳನ್ನು ಆನ್‌ಲೈನ್ ಮೂಲಕ ನೋಂದಾವಣೆ ಮಾಡಿ ಯುಎಎನ್ ಸಂಖ್ಯೆಯನ್ನು ಪಡೆದುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

10 ವರ್ಷ ಸೇವೆಯನ್ನು ಪೂರ್ಣಗೊಳಿಸಿರುವ ಕಾರ್ಮಿಕರಿಗೆ ಪಿಂಚಣಿ ನೀಡುವ ವ್ಯವಸ್ಥೆಯನ್ನೂ ಸಹ ನಮ್ಮ ಇಲಾಖೆ ಪರಿಚಯಿಸಿದೆ. 10 ವರ್ಷದೊಳಗೆ ಸೇವೆಯನ್ನು ನಿಲ್ಲಿಸಿದರೆ ಅವರ ಸಂಪೂರ್ಣ ಭವಿಷ್ಯನಿಧಿ ಮೊತ್ತವನ್ನು ಪಡೆದುಕೊಳ್ಳಬಹುದು ಎಂದು ಸಭೆಗೆ ತಿಳಿಸಿದರು.

ಹೊಸದಾಗಿ ಉದ್ಯಮದ ಮೂಲಕ ಕಾರ್ಮಿಕರನ್ನು ನೋಂದಾಯಿಸುತ್ತಾರೋ ಅವರಿಗೆ ಭಾಗಶಃ ಮೊತ್ತವನ್ನು ಸಂಸ್ಥೆಗೆ ಹಿಂತಿರುಗಿಸಲಾಗುತ್ತಿದೆ. ಪ್ರಧಾನಮಂತ್ರಿ ರೋಜ್‌ಗಾರ್ ಯೋಜನೆಯನ್ನೂ ಭವಿಷ್ಯನಿಧಿಯಡಿಯಲ್ಲಿ ಸಾಕಾರಗೊಳಿಸಲಾಗುತ್ತಿದೆ. ದೇಶದ ಪ್ರತಿಯೊಬ್ಬ ಪ್ರಜೆಯೂ ಸಹ ತಮ್ಮ ಸ್ವಂತ ಮನೆಯನ್ನು ಹೊಂದಲು ಈ ಯೋಜನೆಯು ಸಹಕಾರಿಯಾಗಲಿದೆ, ದಿನಗೂಲಿಯವರಿಗೂ ಈ ಯೋಜನೆಗಳು ಅನ್ವಯಿಸುತ್ತದೆ ಎಂದು ಅವರು ತಿಳಿಸಿದರು.

ಭವಿಷ್ಯ ನಿಧಿ ಅಧಿಕಾರಿಗಳಿಗೆ ಹೂಗುಚ್ಛ ನೀಡಿ ವಂದನೆಗಳನ್ನು ಅರ್ಪಿಸಲಾಯಿತು.

ಥರ್ಮೆಕ್ಸ್ ಕಂಪನಿಯ ಮಾರಾಟ ವಿಭಾಗ ಇಂಜಿನಿಯರ್ ಶ್ರೀ ಕಿರಣ್‌ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ವಿದ್ಯುತ್‌ನಿಂದ ಮತ್ತು ಥರ್ಮಲ್ ಎನರ್ಜಿಯಿಂದ ಉತ್ಪತ್ತಿಯಾಗುವ ವಿದ್ಯುತ್ ಶಕ್ತಿಯ ಬಗ್ಗೆ ಸಭೆಯ ಸದಸ್ಯರಿಗೆ ವಿವರಿಸಿದರು. ಒಂದು ಸಾರಿ ಬಂಡವಾಳ ಹೂಡಿದರೆ ಇದರಿಂದ ನಿಮಗೆ ಬಹಳ ಉಪಯೋಗವಾಗುತ್ತದೆ ಸೋಲಾರ್‌ನಲ್ಲಿ ಬೆಳಗಿನ ಜಾವ ಬಿಸಿ ನೀರು ಸಿಗುವುದಿಲ್ಲ ಆದರೆ ತಮ್ಮ ಕಂಪನಿಯ ಯಂತ್ರೋಪಕರಣಗಳಿಂದ 24 ಗಂಟೆಯೂ ಸಹ ಬಿಸಿ ನೀರು ದೊರೆಯುತ್ತದೆ ಎಂದು ತಿಳಿಸಿದರು.

ಖಜಾಂಚಿಗಳಾದ ಶ್ರೀ ವೀರೇಂದ್ರ ಎನ್. ಕಾಮತ್‌ರವರು ಶ್ರೀ ಕಿರಣ್‌ರವರಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಸಂಘದ ಸದಸ್ಯತ್ವ ಅಪೇಕ್ಷಿಸಿ ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ ಸಭೆಯ ಅನುಮೋದನೆಯೊಂದಿಗೆ ಸಂಘದ ನೂತನ ಸದಸ್ಯರಾಗಿ ಸೇರ್ಪಡೆಗೊಳಿಸಲಾಯಿತು.

ಶ್ರೀ ಬಿ. ಚಂದ್ರಶೇಖರ ಹೆಬ್ಬಾರ್‌ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಕೆಪಿಹೆಚ್‌ಆರ್‌ಎಗೆ ಅಧ್ಯಕ್ಷರಾಗಿ ಆಯ್ಕೆಯಾದ ಬಳಿಕ ಮೊದಲನೇ ಸಭೆ ಆರ್‌ಬಿಐ ಅಧಿಕಾರಿಗಳೊಂದಿಗೆ ನಡೆಸಲಾಯಿತು. ಹೋಟೆಲು ಉದ್ಯಮದಲ್ಲಿ ಚಿಲ್ಲರೆ ವಿಷಯದಲ್ಲಿ ಆಗುತ್ತಿರುವ ಅನನುಕೂಲಗಳ ಕುರಿತು ಒಂದು ಪತ್ರವನ್ನು ನೀಡುವ ಮೂಲಕ ವಿವರಿಸಿ, ಪರಿಹರಿಸಬೇಕೆಂದು ಅವರಿಗೆ ಮನವರಿಕೆ ಮಾಡಿದ್ದಾಗಿ ಸಭೆಗೆ ತಿಳಿಸಿದರು. ಕಾರ್ಮಿಕ ಇಲಾಖೆಯ ಸಚಿವರನ್ನು ದಿಢೀರನೆ ಭೇಟಿ ಮಾಡುವ ಅವಕಾಶ ಒದಗಿ ಬಂದುದ್ದರಿಂದ ಅವರನ್ನು ಭೇಟಿ ಮಾಡಿ ನಮ್ಮ ಉದ್ಯಮದಲ್ಲಿ ಕಾರ್ಮಿಕ ಇಲಾಖೆಯ ಅಧಿಕಾರಿಗಳ ಕಿರುಕುಳದ ಬಗ್ಗೆ ಹಾಗೂ ಇಂತಹ ಸಂದರ್ಭಗಳು ಸೃಷ್ಟಿಯಾಗದಂತೆ ನಿಯಂತ್ರಿಸ ಬೇಕೆಂದು ಅವರಿಗೆ ವಿವರಿಸಿದ್ದೇವೆ ಎಂದು ತಿಳಿಸಿದರು.

1997 ರಿಂದ 10 ವರ್ಷ ಅಧ್ಯಕ್ಷನಾಗಿ ನಾನು ಸಂಸ್ಥೆಗೆ ಆದಷ್ಟು ದಕ್ಷತೆಯಿಂದ ಸೇವೆ ಸಲ್ಲಿಸಿದ್ದೇನೆ. ಎಲ್ಲರೂ ನನಗೆ ಚೆನ್ನಾಗಿ ಸಹಕಾರ ನೀಡಿದ್ದೀರಿ. ನಮ್ಮ ಸಂಘದ ಪದಾಧಿಕಾರಿಗಳನ್ನೇ ಒಂದು ತಂಡವನ್ನಾಗಿ ಮಾಡಿಕೊಂಡು ಜಿಎಸ್‌ಟಿ ವಿಷಯದಲ್ಲಿ ಬಹಳಷ್ಟು ಹೋರಾಟ ಮಾಡಿ ಗೆದ್ದಿದ್ದೇವೆ. ವಾಸುದೇವ ಅಡಿಗರೂ ಸಹ ಅಮೃತ ಮಹೋತ್ಸವವೆಂಬ ದೊಡ್ಡ ಕಾರ್ಯಕ್ರಮವನ್ನು ಬಹಳ ಯಶಸ್ವಿಯಾಗಿ ಪೂರ್ಣಗೊಳಿಸಿದ್ದು, ಬೆಂಗಳೂರು ಹೋಟೆಲು ಸಂಘವು ಅಂತ್‌ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿತು. ಕೆಪಿಹೆಚ್‌ಆರ್‌ಎ ಕಾರ್ಯಕಾರಿ ಸಮಿತಿಯ ಸದಸ್ಯರು ಸಹ ಇಲ್ಲಿ ಬಂದಿದ್ದಾರೆ ಹಾಗೂ ಪ್ರತಿಯೊಬ್ಬ ಸದಸ್ಯರೂ ಸಹ ಸಹಕಾರ ಕೊಟ್ಟಿದ್ದೀರಿ. ಮುಂದೆಯೂ ಸಹ ಹೀಗೆಯೇ ಸರ್ಕಾರದಿಂದ ಬಂದ ಕಾನೂನು ನಮಗೆ ಕಷ್ಟವಾದಾಗ ನಾವು ಹೋರಾಟ ಮಾಡುತ್ತೇವೆ. ಕೆಪಿಹೆಚ್‌ಆರ್‌ಎ ಆರ್ಥಿಕವಾಗಿ ಹಿಂದುಳಿದಿದೆ. ನಮ್ಮ ಸಂಘದ ಸದಸ್ಯರು ಅಲ್ಲಿಯೂ ಸಹ ಸದಸ್ಯರಾಗಿ ಎಂದು ಸಭೆಯಲ್ಲಿ ಕೋರಿದರು. ಇಷ್ಟು ವರ್ಷ ಸಹಕಾರ ಮಾಡಿದ್ದಕ್ಕೆಎಲ್ಲರಿಗೂ ಧನ್ಯವಾದಗಳು ಎಂದು ತಿಳಿಸಿದರು.

ನಂತರ ಕೆಪಿಹೆಚ್‌ಆರ್‌ಎಗೆ ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ಅಭಿನಂದನಾ ಸಮಾರಂಭ ವನ್ನು ಏರ್ಪಡಿಸಲಾಗಿತ್ತು, ಶ್ರೀ ಜಿ.ಕೆ. ಸೋಮಯಾಜಿ ಇದರ ನಿರೂಪಣೆ ಮಾಡಿದರು. ಕೆಪಿಹೆಚ್‌ಆರ್‌ಎಗೆ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ.ಪಿ.ಸಿ.ರಾವ್, ಶ್ರೀ ಕೆ.ಎನ್.ವಾಸುದೇವ ಅಡಿಗ, ಶ್ರೀ.ರವಿಶಾಸ್ತ್ರಿ, ಶ್ರೀ ಸುರೇಶ ಶೆಟ್ಟಿ, ಶ್ರೀ ಮಹೇಶ್ ಶೆಟ್ಟಿ, ಶ್ರೀ ಸದಾನಂದ ಪ್ರಭು ಇವರಿಗೆ ಶಾಲು, ಪೇಟ ಹಾರ ಹಾಕುವ ಮೂಲಕ ಅಭಿನಂದನೆ ಸಲ್ಲಿಸಲಾಯಿತು.

ಸಂಘದ ಅಧ್ಯಕ್ಷರು ಹಾಗೂ ಕೆಪಿಹೆಚ್ಆರ್ಎಯ ನೂತನ ಅಧ್ಯಕ್ಷರಾಗಿರುವ ಶ್ರೀ.ಬಿ.ಚಂದ್ರಶೇಖರ ಹೆಬ್ಬಾರ್‌ರವರಿಗೆ ನಮ್ಮ ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರುಗಳು ಎಲ್ಲರೂ ಸೇರಿ ಅಭಿನಂದನೆ ಸಲ್ಲಿಸಿದರು. ಗೌರವ ಕಾರ್ಯದರ್ಶಿಗಳಾದ ಶ್ರೀ ಸುಬ್ರಮಣ್ಯ ಹೊಳ್ಳರವರು ಸಂಘದ ಅಧ್ಯಕ್ಷರು ಹಾಗೂ ಕೆಪಿಹೆಚ್ಆರ್ಎಯ ಅಧ್ಯಕ್ಷರೂ ಆಗಿರುವ ಶ್ರೀ ಬಿ.ಚಂದ್ರಶೇಖರ ಹೆಬ್ಬಾರ್‌ರವರಿಗೆ, ನಮ್ಮ ಸಂಘದ ಕಛೇರಿಯಲ್ಲಿ ಮಾಸಿಕ ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಕಾರ್ಯಕಾರಿ ಸಮಿತಿಯ ಸದಸ್ಯರಿಗೆ, ವಿಶೇಷ ಆಹ್ವಾನಿತರಿಗೆ ಹಾಗೂ ಸಮಾರಂಭಕ್ಕೆ ಆಗಮಿಸಿದ ವಿವಿಧ ಸಂಸ್ಥೆಗಳ ಪ್ರತಿನಿಧಿಗಳಿಗೆ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು.

## ಆಹಾರ ಸುರಕ್ಷಾ ಕಾಯಿದೆ ರದ್ದಿಗೆ ಕೇಂದ್ರ ಸಚಿವರಿಗೆ ಮನವಿ



ಬೆಂಗಳೂರು: ಬಿಬಿಹೆಚ್ಎ ಮತ್ತು ಕೆಪಿಹೆಚ್ಆರ್ಎ ಅಧ್ಯಕ್ಷರಾದ ಶ್ರೀ ಬಿ.ಚಂದ್ರಶೇಖರ ಹೆಬ್ಬಾರ್ ಮತ್ತು ಬಿಬಿಹೆಚ್ಎ ಉಪಾಧ್ಯಕ್ಷರೂ ಕೆಪಿಹೆಚ್ಆರ್ಎ ಖಜಾಂಚಿಗಳೂ ಆಗಿರುವ ಶ್ರೀ ಪಿ.ಸಿ.ರಾವ್, ಬಿಬಿಹೆಚ್ಎ ಗೌರವ ಕಾರ್ಯದರ್ಶಿಗಳಾದ ಶ್ರೀ ಸುಬ್ರಹ್ಮಣ್ಯ ಹೊಳ್ಳ, ಜಂಟಿ ಕಾರ್ಯದರ್ಶಿ ಶ್ರೀ ಎಸ್.ಚಂದ್ರಹಾಸ ಹಾಗೂ ಸಂಘದ ಮಾಜಿ ಅಧ್ಯಕ್ಷ ಶ್ರೀ ಕೆ.ಎನ್.ವಾಸುದೇವ ಅಡಿಗ ಅವರುಗಳನ್ನೊಳಗೊಂಡ ನಿಯೋಗವು ಇತ್ತೀಚೆಗೆ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಇಲಾಖೆ ಸಚಿವರಾದ ಶ್ರೀ ಅನಂತಕುಮಾರ್ ಅವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿ ಆಹಾರೋದ್ಯಮದ ಮೇಲೆ ಹೇರಲುದ್ದೇಶಿಸಿರುವ ಆಹಾರ ಸುರಕ್ಷಾ ಮತ್ತು ಗುಣಮಟ್ಟ ಕಾಯಿದೆಯನ್ನು ರದ್ದು ಮಾಡುವಂತೆ ಮನವಿ ಸಲ್ಲಿಸಿದೆ.

ನಮ್ಮ ದೇಶದ ಆಹಾರ ಪದ್ಧತಿಗೆ ಹೊಂದಿಕೊಳ್ಳದ ಅಂಶಗಳನ್ನು ಒಳಗೊಂಡಿರುವ ಈ ಕಾಯಿದೆಯು ಹೋಟೆಲು ಉದ್ದಿಮೆಗೆ ಮತ್ತು ನಮ್ಮ ಪಾರಂಪರಿಕ ಆಹಾರ ಸಂಸ್ಕೃತಿಗೆ ಮಾರಕವಾಗಿರುವುದರಿಂದ ಈ ಕಾಯಿದೆ ಜಾರಿಯ ವಿರುದ್ಧ ಕೆಪಿಹೆಚ್ಆರ್ಎ ಮತ್ತು ಬಿಬಿಹೆಚ್ಎಗಳು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ತಡೆಯಾಜ್ಞೆಯನ್ನು ತಂದಿದ್ದು, ಒಂದೊಮ್ಮೆ ಈ ಕಾಯಿದೆಯು ಜಾರಿಗೆ ಬಂದಲ್ಲಿ ಅದರ ಪ್ರಯೋಜನಕ್ಕಿಂತಲೂ ದುರುಪಯೋಗದ ಸಂಭವವೇ ಹೆಚ್ಚಾಗಿರುವ ಕಾರಣ ಕಾಯಿದೆಯನ್ನು ರದ್ದು ಮಾಡುವ ಅಗತ್ಯವಿದೆ ಎಂದು ನಿಯೋಗ ಅಭಿಪ್ರಾಯ ಪಟ್ಟಿದೆ.

ಹೋಟೆಲು ಉದ್ಯಮದ ಉಳಿವಿಗೆ ಮಾರಕವಾಗಿರುವ ಆಹಾರ ಸುರಕ್ಷಾ ಮತ್ತು ಗುಣಂಟ್ಟ ಕಾಯಿದೆಯನ್ನು ರದ್ದು ಮಾಡಿದಲ್ಲಿ ನ್ಯಾಯಾಲಯದಲ್ಲಿ ಹೂಡಿರುವ ಮೊಕದ್ದಮೆಯನ್ನು ಹಿಂದೆಗೆಯಲು ಸಂಘವು ಉದ್ದೇಶಿಸಿದೆ ಎಂದು ನಿಯೋಗವು ಸಚಿವರಿಗೆ ತಿಳಿಸಿದೆ.

# ಅಧಿಕಾರ ಸ್ವೀಕಾರ




ಮೈಸೂರಿನ ಹೋಟೆಲು ಮಾಲೀಕರ ಸಂಘದ ಮಾಜಿ ಅಧ್ಯಕ್ಷರೂ ಎಫ್‌ಕೆಸಿಸಿಐ ಹಿರಿಯ ಉಪಾಧ್ಯಕ್ಷರೂ ಆದ ಶ್ರೀ ಸುಧಾಕರ ಶೆಟ್ಟರು 2–7–2018ರಂದು ಎಫ್‌ಕೆಸಿಸಿಐ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಬೃಹತ್ ಬೆಂಗಳೂರು ಹೋಟೆಲುಗಳ ಸಂಘ ಮತ್ತು ಕೆಪಿಹೆಚ್‌ಆರ್‌ಎ ಅಧ್ಯಕ್ಷರಾದ ಶ್ರೀ ಬಿ. ಚಂದ್ರಶೇಖರ ಹೆಬ್ಬಾರ್ ಮತ್ತು ಉಭಯ ಸಂಘಗಳ ಪದಾಧಿಕಾರಿಗಳು ಹಾಗೂ ಅನೇಕ ಗಣ್ಯರು ಉಪಸ್ಥಿತರಿದ್ದು ಶ್ರೀ ಸುಧಾಕರ ಶೆಟ್ಟರನ್ನು ಅಭಿನಂದಿಸಿದರು.

# ಆರ್. ಬಿ. ಐ. ಅಧಿಕಾರಿಗಳ ಭೇಟಿ

ಬೆಂಗಳೂರು: ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಅಧ್ಯಕ್ಷರಾದ ಶ್ರೀ ಬಿ.ಚಂದ್ರಶೇಖರ ಹೆಬ್ಬಾರ್ ಉಪಾಧ್ಯಕ್ಷರಾದ ಶ್ರೀ ಪಿ.ಸಿ.ರಾವ್, ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಹೊಳ್ಳ ಮತ್ತು ಖಜಾಂಚಿ ಶ್ರೀ ವೀರೇಂದ್ರ ಕಾಮತ್ ಅವರುಗಳನ್ನೊಳಗೊಂಡ ನಿಯೋಗವು ಇತ್ತೀಚೆಗೆ ಆರ್‌ಬಿಐ ಪ್ರಾದೇಶಿಕ ವ್ಯವಸ್ಥಾಪಕರನ್ನು ಭೇಟಿ ಮಾಡಿ ನಗರದ ಹೋಟೆಲು ಉದ್ಯಮದಾರರಿಗೆ ಸರಿಯಾಗಿ ಚಿಲ್ಲರೆ ನಾಣ್ಯಗಳು ದೊರೆಯುತ್ತಿಲ್ಲವೆಂದು ತಿಳಿಸಿದರು.

ಕಳೆದ ಮೂರು ತಿಂಗಳುಗಳಿಂದ ಬ್ಯಾಂಕುಗಳ ಮೂಲಕ ಹೋಟೆಲು ಉದ್ಯಮದಾರರಿಗೆ ಚಿಲ್ಲರೆ ನಾಣ್ಯಗಳು ದೊರೆಯುತ್ತಿಲ್ಲವೆಮದು ತಿಳಿಸಿದ ನಿಯೋಗದ ಸದಸ್ಯರು, ಹತ್ತು ರುಪಾಯಿಯ ನಾಣ್ಯಗಳನ್ನು ತೆಗೆದುಕೊಳ್ಳಲು ಗ್ರಾಹಕರು ಹಿಂಜರಿಯುತ್ತಿರುವುದರಿಂದ ಹೋಟೆಲು ಉದ್ಯಮದಾರರಿಗೆ ಹತ್ತು ರುಪಾಯಿಯ ನಾಣ್ಯಗಳನ್ನು ನೀಡಬಾರದೆಂದು ಮನವಿ ಮಾಡಿದರು.

ರೂ.1, 2, 5ರ ನಾಣ್ಯಗಳನ್ನು ಸರಿಯಾಗಿ ವಿತರಿಸಬೇಕೆಂದು ನಿಯೋಗದ ಸದಸ್ಯರುಗಳು ವಿನಂತಿಸಿದರು. ಅಗತ್ಯ ಪ್ರಮಾಣದಲ್ಲಿ ಹೆಚ್ಚಿನ ಚಿಲ್ಲರೆ ನಾಣ್ಯಗಳನ್ನು ವಿತರಿಸಲು ಸದ್ಯದಲ್ಲಿಯೇ ಕ್ರಮಕೈಗೊಳ್ಳುವುದಾಗಿ ಆರ್‌ಬಿಐ ಅಧಿಕಾರಿಗಳು ಭರವಸೆ ನೀಡಿದರು.

# ಕೆಪಿಹೆಚ್ಆರ್ಎ ನೂತನ ಪದಾಧಿಕಾರಿಗಳಿಗೆ ಬಿ.ಬಿ.ಹೆಚ್.ಎ. ವತಿಯಿಂದ ಅಭಿನಂದನೆಯ ಚಿತ್ರಗಳು



ಅಧ್ಯಕ್ಷ ಶ್ರೀ ಚಂದ್ರಶೇಖರ ಹೆಬ್ಬಾರ್ ಅವರಿಗೆ ಅಭಿನಂದನೆ



ಗೌ॥ ಕಾರ್ಯದರ್ಶಿ ಶ್ರೀ ಮಧುಕರಶೆಟ್ಟಿ ಅವರಿಗೆ ಅಭಿನಂದನೆ



ಉಪಾಧ್ಯಕ್ಷ ಶ್ರೀ ಪಿ.ಸಿ. ರಾವ್ ಅವರಿಗೆ ಅಭಿನಂದನೆ



ಉಪಾಧ್ಯಕ್ಷ ಶ್ರೀ ವಾಸುದೇವ ಅಡಿಗ ಅವರಿಗೆ ಅಭಿನಂದನೆ



ಉಪಾಧ್ಯಕ್ಷ ಶ್ರೀ ರವಿಶಾಸ್ತ್ರಿ ಅವರಿಗೆ ಅಭಿನಂದನೆ



ಉಪಾಧ್ಯಕ್ಷ ಶ್ರೀ ಸುರೇಶ್ ಶೆಟ್ಟಿ ಅವರಿಗೆ ಅಭಿನಂದನೆ

# ಪ್ರತಿಭಾ ಪುರಸ್ಕಾರ

19–8–2018ರಂದು ಭಾನುವಾರದಂದು ಎಫ್‌ಕೆಸಿಸಿಐ ಸಭಾಂಗಣದಲ್ಲಿ ನಡೆಯಲಿರುವ ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಹೋಟೆಲು ಉದ್ಯಮದಾರರ ಮತ್ತು ಹೋಟೆಲುಗಳ ಕಾರ್ಮಿಕರ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಉದ್ದೇಶಿಸಲಾಗಿದ್ದು, ಎಸ್ಸೆಸ್ಸೆಲ್ಸಿ ಮತ್ತು 2ನೇ ಪಿಯುಸಿ ಪರೀಕ್ಷೆಗಳಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿ ತೇರ್ಗಡೆಯಾದ ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿ ಮತ್ತು ಭಾವಚಿತ್ರದೊಂದಿಗಿನ ಅರ್ಜಿಯನ್ನು 10–8–2018ರೊಳಗಾಗಿ ಸಂಘದ ಕಾರ್ಯಾಲಯಕ್ಕೆ ಕಳುಹಿಸಿ ಕೊಡಬೇಕೆಂದು ಕೋರಲಾಗಿದೆ.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :**

**ದೂರವಾಣಿ – 080–26509314, ಮೊ. : 9916118513**

# ಪೌರ ಕಾರ್ಮಿಕರ ವೇತನ ಬಾಕಿ ಒಂದು ಯಕ್ಷಪ್ರಶ್ನೆ

ಬೆಂಗಳೂರು ದೇಶದ ಭೂಪಟದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟ ಮಹಾನಗರ. ನಮ್ಮದೇ ಹೋಟೆಲು ಉದ್ಯಮಕ್ಕೂ ಅದೇ ರೀತಿಯ ಆಧುನಿಕ ವಿಜ್ಞಾನದ ಮುಂಚೂಣಿಯಲ್ಲಿ ಪ್ರಭಾವ ಬೀರಿರುವ ಮಾಹಿತಿ ತಂತ್ರಜ್ಞಾನ ಉದ್ಯಮಕ್ಕೂ ಈ ನೆಲ ಸಮಾನವಾದ ಅವಕಾಶಗಳನ್ನು ಒದಗಿಸಿದೆ. ಯಾವುದೇ ಊರಿನ ಆಹಾರ ಪದ್ಧತಿಯ ಆಧಾರದಲ್ಲಿ ಹೊಸ ಹೋಟೆಲು ಸ್ಥಾಪಿಸುವವರಿಗೂ ಅದೇ ರೀತಿಯ ಅಂತಾರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಗಳಿಗೂ ಈ ನೆಲವು ಕೆಂಪುಹಾಸು ಹಾಸಿ ಸ್ವಾಗತ ಬಯಸುತ್ತದೆ. ನಿತ್ಯವೆಂಬಂತೆ ಈ ನಗರಕ್ಕೆ ಬರುವ ಜನರು ಒಂದೋ ತಂತ್ರೋದ್ಯಮ ಅಥವಾ ಹೋಟೆಲು ಉದ್ಯಮದ ಆಸರೆಯನ್ನಾಂತು ಆಗಮಿಸುತ್ತಾರೆ ಎಂದರೆ ಅತಿಶಯವಾಗುವುದಿಲ್ಲ. ಯಾವುದೇ ಕೆಲಸಕ್ಕೆ ಬರಲಿ ಊಟೋಪಹಾರಗಳಿಲ್ಲದೇ ದಿನದೂಡಲಾಗುವುದಿಲ್ಲ.

ಈ ನಗರವು  ರಾಜಕೀಯವಾಗಿ ರಾಜ್ಯಕ್ಕೆ ಮುಖ್ಯವಾಗಿರಬಹುದು. ಆದರೆ ಔದ್ಯಮಿಕವಾಗಿ ದೇಶಕ್ಕೂ ಮುಖ್ಯವೇ ಆಗಿದೆ. ಹೀಗಿರುವಾಗ ಇಲ್ಲಿಯ ಮೂಲಸೌಲಭ್ಯಗಳ ಬಗ್ಗೆ ಸರಕಾರ ಮತ್ತು ಸ್ಥಳೀಯಾಡಳಿತ ಸಂಸ್ಥೆಯಾದ ಮಹಾನಗರ ಪಾಲಿಕೆಗಳು ಬಹಳ ಪ್ರಾಮುಖ್ಯತೆ ನೀಡಬೇಕು. ಇಲ್ಲಿಯ ನೀರಿನ ಸೌಲಭ್ಯ, ಇಲ್ಲಿಯ ಒಳಚರಂಡಿ ವ್ಯವಸ್ಥೆ, ರಸ್ತೆಗಳು, ವಿದ್ಯುತ್ ಸರಬರಾಜು, ನೈರ್ಮಲ್ಯ ಇತ್ಯಾದಿ ವಿಚಾರಗಳು ಈ ಹೊತ್ತಿನಲ್ಲಿ ಬಹಳ ಮಹತ್ವ ಪಡೆಯುತ್ತವೆ.

ಈ ಎಲ್ಲ ಕೆಲಸಗಳನ್ನು ಸುಸೂತ್ರವಾಗಿ ನಡೆಸುವಲ್ಲಿ ನಗರದ ಪೌರಕಾರ್ಮಿಕರು ಪರಿಶ್ರಮಿಸುವುದನ್ನು ನಾವು ನಿತ್ಯವೂ ನೋಡುತ್ತೇವೆ. ಒಂದು ಪೌರಕಾರ್ಮಿಕರು ಬಿಡುವು ತೆಗೆದುಕೊಂಡಲ್ಲಿ ಮರುದಿನ ಬೆಂಗಳೂರು ಗಬ್ಬೆದ್ದು ನಾರಲಾರಂಭಿಸುತ್ತದೆ. ಬೆಂಗಳೂರಿನ ಕಸಸಾಗಾಟವೂ ಪೌರಕಾರ್ಮಿಕರನ್ನೇ ಅವಲಂಬಿಸಿದ ಕಾರ್ಯಭಾರ. ಇನ್ನುಳಿದ ಯಾವುದೇ ಕೆಲಸ ಒಂದು ದಿನ ತಡೆದರೂ ನಡೆದೀತು. ಆದರೆ ನೈರ್ಮಲ್ಯ ಒಂದು ದಿನ ನಿಧಾನವಾದರೂ ಬೆಂಗಳೂರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗುತ್ತದೆ ಎಂಬುದು ಹಿಂದೆಯೇ ಸಾಬೀತಾದ ಸಂಗತಿ.

ಇತ್ತೀಚೆಗೆ ಓರ್ವ ಪೌರ ಕಾರ್ಮಿಕ ತನಗೆ ಹಲವಾರು ತಿಂಗಳುಗಳಿಂದ ವೇತನ ನೀಡಿಲ್ಲವೆಂಬ ಕಾರಣಕ್ಕೆ ಸಂಸಾರ ಹೊರೆ ಹೊರಲಾರದೆ ಆತ್ಮಹತ್ಯೆ ಮಾಡಿಕೊಂಡ ವರದಿ ಈ ಸಂದರ್ಭದಲ್ಲಿ ಉಲ್ಲೇಖನೀಯ.  ಅತ್ಯಂತ ಮಹತ್ವದ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ಈ ಪೌರಕಾರ್ಮಿಕರಿಗೆ ಕಳೆದ ಆರು ತಿಂಗಳಿನಿಂದ ವೇತನವೇ ಬಟಾವಾಡೆಯಾಗಿಲ್ಲವೆಂಬ ಮಾಹಿತಿ  ಆ ಬಳಿಕವಷ್ಟೇ ಬೆಳಕಿಗೆ ಬಂದಿದೆ. ಹಾಗಾದರೆ ಪೌರ ಕಾರ್ಮಿಕರೇಕೆ ಇಷ್ಟು ದಿನ ಸಹಿಸಿಕೊಂಡಿದ್ದರೆಂಬುದೇ ಪ್ರಶ್ನೆ.

ಕೆಳಸ್ತರದ ಉದ್ಯೋಗಿಗಳನ್ನು ಮಹಾನಗರ ಪಾಲಿಕೆ ಮತ್ತು ಸರಕಾರ ನಿರ್ಲಕ್ಷಿಸಿತೇಕೆ? ತಮ್ಮ ಹಲವು ತಲೆಮಾರಿಗಾಗುವಷ್ಟು ಸಂಪಾದಿಸಿಕೊಳ್ಳುವ ರಾಜಕಾರಣಿಗಳು ಪೌರಕಾರ್ಮಿಕರ ನಿತ್ಯದ ಅನ್ನದ ವ್ಯವಸ್ಥೆಯನ್ನು ಮಾಡಲಿಕ್ಕೂ ಮೀನಮೇಷ ಎಣಿಸುವುದೇಕೆ?

ಈ ಹಿನ್ನೆಲೆಯಲ್ಲಿ ವಿಶ್ಲೇಷಿಸುವಾಗ ನಮ್ಮ ತಿಳಿವಳಿಕೆಗೆ ಬರುವುದು ಹಿಂದಿನ ಸರಕಾರ ತನ್ನ ಕೊನೆಯ ತಿಂಗಳುಗಳಲ್ಲಿ ಪೌರಕಾರ್ಮಿಕರಿಗೆ ಸಂಬಳ ಕೊಡುವುದನ್ನು ನಿಲ್ಲಿಸಿಯೇ ಬಿಟ್ಟಿತ್ತೇ ಎಂಬ ಅನುಮಾನ. ಹತ್ತು ಹಲವು ಫ್ರೀ ಭಾಗ್ಯಗಳನ್ನು ಘೋಷಿಸಿ ಜನರ ಮೂಗಿಗೆ ತುಪ್ಪ ಸವರುವ ಹೊತ್ತಿನಲ್ಲಿ ಕೆಲಸ ಮಾಡುತ್ತಿದ್ದ ಸರಕಾರದಡಿಯ ಪರಿಶ್ರಮಿಗಳಿಗೆ ಕೊಡಬೇಕಾದ ಸಂಬಳವನ್ನೂ ಕೊಡಲಿಲ್ಲವೆಂದರೆ ಸರಕಾರದ ಬೊಕ್ಕಸದಲ್ಲಿ ಮೊದಲೇ ಹಣ ಖಾಲಿಯಾಗಿತ್ತೇ? ಹಾಗಾದರೆ ಅನ್ಯಾನ್ಯ ಭಾಗ್ಯಗಳನ್ನು ಹೇಗೆ ಘೋಷಿಸಿದರು, ಹೇಗೆ ಜಾರಿಗೊಳಿಸಿದರು. ಮತ್ತು ಸರಕಾರದ ಖಜಾನೆಯನ್ನು ಯಾಕೆ ಬರಿದು ಮಾಡಿದರು? ಮುಂದೆ ನಾವು ಅದಿಕರಕ್ಕೆ ಬರಲಿಕ್ಕಿಲ್ಲ, ಅಂತಹ ಹೊತ್ತಿನಲ್ಲಿ ಬರುವ ಹೊಸ ಸರಕಾರ ಇಕ್ಕಟ್ಟನ್ನು, ಅನುಭವಿಸಲಿ, ಬಿಕ್ಕಟ್ಟನ್ನು ಎದುರಿಸಲಿ ಎಂದೇ ಹೀಗೆ ಮಾಡಿದರೋ?

ಈಗ ಸರಕಾರ ರೈತರ ಸಾಲ ಮಾಡುವ ಘೋಷಣೆ ಹೊರಡಿಸಿದೆ. ಇದರಿಂದ ಹೊರೆಯಾಗುವ 50,000 ಕೋಟಿಗೂ ಹೆಚ್ಚು ಹಣವನ್ನು ಸಂಗ್ರಹಿಸುವುದು ಎಲ್ಲಿಂದ ಎಂಬ ಪ್ರಶ್ನೆ ಮುಂದಿರುವಾಗಲೇ ಕಳೆದ ಆರು ತಿಂಗಳಿಂದ ಪೌರ ಕಾರ್ಮಿಕರಿಗೆ ಸಂಬಳವನ್ನೇ ಕೊಡಲಿಲ್ಲವೆಂಬ ಸತ್ಯ ಬಯಲಾಗಿದೆ. 25 ಕೋಟಿಗೂ ಹೆಚ್ಚು ಹಣ ವಿತರಣೆಗೆ ಬೇಕಾಗಿದೆ. ತಕ್ಷಣವೇ ವೇತನ ಬಿಡುಗಡೆಯ ಭರವಸೆ ನೀಡಲಾಗಿದೆ.

ಇನ್ನು ಯಾವ್ಯಾವ ಇಲಾಖೆಗಳ ಯಾವ್ಯಾವ ವಿಭಾಗಗಳಿಗೆ ಎಷ್ಟೆಷ್ಟು ಹಣ ಪಾವತಿಗೆ ಬಾಕಿ ಇದೆ ಎಂಬುದು ಪ್ರಕಟವಾಗಿಲ್ಲ. ಮೊದಲೇ ಕರ್ನಾಟಕದ ಮಹಾಜನತೆಯ  ತಲೆಯ ಮೇಲೆ ಹಿಂದಿನ ಸರಕಾರವೇ ಲಕ್ಷಗಟ್ಟಲೆ ಸಾಲದ ಹೊರೆ ಇಟ್ಟು ಹೋಗಿದೆ. ಈಗಿನ ಸರಕಾರವೂ ಪ್ರಕಟಿಸುತ್ತಿರುವ ಭರವಸೆಗಳ ಈಡೇರಿಕೆಗೆ ಬಹುಕೋಟಿ ಹಣದ ಅಗತ್ಯವಿದೆ. ಮುಂದಿನ ದಿನಗಳಲ್ಲಿ ಯಾವ್ಯಾವ ಅಗತ್ಯ ವಸ್ತುಗಳ ಮೇಲೆ ಇನ್ನೆಷ್ಟು ತೆರಿಗೆಯ ಹೊರೆ ಬೀಳಲಿದೆ ಎನ್ನುವುದು ಆತಂಕದ ವಿಷಯ.

ವಿದ್ಯಮಾನ

# ಬಜೆಟ್‌ನಲ್ಲಿ ಹೆಚ್ಚುವರಿ ತೆರಿಗೆ ಹೊರೆ

ಮುಖ್ಯಮಂತ್ರಿಗಳು ಬಜೆಟಿಗೆ ಬೇಕಾದ ಹಣವನ್ನು ರಾಜ್ಯದಲ್ಲಿ ಸಂಗ್ರಹಿಸಲೇ ಬೇಕೆಂದು ನಿರ್ಣಯಿಸಿ ಡೀಸೆಲ್ ಮತ್ತು ಪೆಟ್ರೋಲು ಮತ್ತಿತರ ಇಂಧನಗಳ ಮೇಲೆ ಹೆಚ್ಚುವರಿ ತೆರಿಗೆ ಹೇರಿದ್ದಾರೆ.

ರಾಜ್ಯದಲ್ಲಿ ಎರಡು ತಿಂಗಳ ಹಿಂದೆ ಅಸ್ತಿತ್ವಕ್ಕೆ ಬಂದಿರುವ ಕಾಂಗ್ರೆಸ್ ಮತ್ತು ಜೆಡಿಎಸ್ ಸಮ್ಮಿಶ್ರ ಸರಕಾರವು ನೂತನ ಸರಕಾರದ ವತಿಯಿಂದ ಬಹುವಿರೋಧಗಳ ನಡುವೆಯೇ ಬಜೆಟ್ ಮಂಡನೆಯಾಗಿದೆ. ಬಜೆಟ್‌ನಲ್ಲಿ ಏನಿದೆ ಎನ್ನುವುದಕ್ಕಿಂತಲೂ ಬಜೆಟ್ ಮಂಡನೆಯ ಪರ ವಿರೋಧವಾಗಿ ಸರಕಾರದ ಪಾಲುದಾರ ಪಕ್ಷಗಳಲ್ಲೇ ಭಿನ್ನಮತವಿದ್ದುದು ಕರ್ನಾಟಕದ ಮಹಾಜನರ ದುರ್ವಿಧಿ ಎನ್ನಬಹುದು.

ಭಿನ್ನಮತವನ್ನು ಜೀವಂತವಾಗಿಟ್ಟುಕೊಂಡು ಈ ಸರಕಾರ ಯಾವರೀತಿಯ ಆಡಳಿತ ನೀಡ ಬಹುದೆಂಬುದು ಯಕ್ಷಪ್ರಶ್ನೆಯಾಗಿದೆಯಾದರೂ ದೇವರ ದಯೆಯಿಂದ ಮಾಜಿಮುಖ್ಯಮಂತ್ರಿ ಸಿದ್ಧರಾಮಯ್ಯನವರ ಮತ್ತು ಅವರ ಬೆಂಬಲಿಗ ಪಟಾಲಮ್ಮಿನ ವಿರೋಧದ ನಡುವೆಯೇ ಹೇಗೋ ಸರ್ಕಸ್ಸು ಮಾಡಿ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಬಜೆಟ್ ಮಂಡಿಸಿದ್ದಾರೆ.

ನಾವು ಅಧಿಕಾರಕ್ಕೆ ಬಂದರೆ ರೈತರ ಸಾಲವನ್ನು ಸಂಪೂರ್ಣ ಮನ್ನಾ ಮಾಡುತ್ತೇವೆ ಎಂದ ಜೆಡಿಎಸ್‌ಗೆ ರಾಜ್ಯದಲ್ಲಿ ಸಿಕ್ಕಿದ್ದು 38 ಸ್ಥಾನಗಳಷ್ಟೇ ಆಗಿದ್ದರೂ ಅವರು ವಿಚಿತ್ರ ಬೆಳವಣಿಗೆಯ ಮುಖಾಂತರ ಪರಿಸ್ಥಿತಿಯ ಲಾಭ ಪಡೆದು ಅಧಿಕಾರ ಪಡೆದಿದ್ದಾರೆ. ರೈತರಿಗೆ ನೀಡಿದ ಭರವಸೆಯಂತೆ ಸಾಲಮನ್ನಾ ಮಾಡಲು ಸರಕಾರದಲ್ಲಿ ಹಣವಿಲ್ಲ. ಹಿಂದಿನ ಸರಕಾರವೇ ಖಜಾನೆಯನ್ನು ಬರಿದೋ ಬರಿದು ಮಾಡಿ ಹೋಗಿದ್ದಾಗಿದೆ. ಖಜಾನೆ ಬರಿದಾಗಿದ್ದು, ಸಾಲಮನ್ನಾ ಮಾಡಲು ಬೇಕಾದ 50,000 ಚಿಲ್ಲರೆ ಕೋಟಿ ಹಣವನ್ನು ತರುವುದೆಲ್ಲಿಂದ ಎಂಬ ಪ್ರಶ್ನೆಗಳ ಜತೆಯಲ್ಲೇ ಸಾಲಮನ್ನಾ ಮಾಡುತ್ತೇನೆಂಬ ಭರವಸೆ ಯೊಂದಿಗೇ ಬಜೆಟ್ ಮಂಡನೆಯಾಗಿದೆ. ಬಜೆಟ್ ಭರವಸೆಗಳನ್ನು ಪೂರ್ಣಗೊಳಿಸಲಿಲ್ಲ ಎಂದು ಅದೇ ದಿನ ರಾಜ್ಯದಲ್ಲಿ ಮೂವರು ರೈತರು ಆತ್ಮಹತ್ಯೆ ಮಾಡಿಕೊಂಡದ್ದೂ ವರದಿಯಾಗಿದೆ.

ಇನ್ನಿತರ ವಿಷಯಗಳು ಒತ್ತಟ್ಟಿಗಿರಲಿ, ಪೆಟ್ರೋಲು ಮತ್ತು ಡೀಸೆಲ್‌ಗಳ ಮೇಲೆ ಏರಿಸಲಾದ ತೆರಿಗೆಗಳೇ ಇನ್ನೆಲ್ಲ ವಸ್ತುಗಳ ಮೇಲೂ ಪರಿಣಾಮ ಬೀರುತ್ತವೆಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಸಹಜವಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಾಟವಾಗುವ ಎಲ್ಲ ವಸ್ತುಗಳ ಬೆಲೆಗಳೂ ಏರಿಕೆಯಾಗುತ್ತವೆ. ಈ ಬೆಲೆ ಏರಿಕೆಯು ಹೋಟೆಲು ಉದ್ಯಮದ ಮೇಲೂ ಪರಿಣಾಮ ಬೀರುತ್ತವೆ. ಹೋಟೆಲು ಉದ್ಯಮಕ್ಕೆ ಅಗತ್ಯವಾದ ಪೂರಕ ವಸ್ತುಗಳು ಎಲ್ಲಿಂದಲೋ ಬರಬೇಕಾಗಿದ್ದರೆ ಅವುಗಳು ತಮ್ಮ ಬೆಲೆಯನ್ನು ಏರಿಸಿಕೊಂಡೇ ಬರುತ್ತವೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಾಯಿತೆಂದು ತಿಂಡಿತಿನಿಸುಗಳ ಬೆಲೆಗಳನ್ನು ಏರಿಸುವುದು ಸಾಧ್ಯವಿಲ್ಲ. ಬೆಲೆಗಳನ್ನು ಏರಿಕೆ ಮಾಡಿದರೆ ಗ್ರಾಹಕರ ವಿರೋಧವನ್ನು ಕಟ್ಟಿಕೊಳ್ಳುವುದು ಅನಿವಾರ್ಯವಾಗುತ್ತದೆ.

ಪದೇ ಪದೇ ಹೋಟೆಲು ಉದ್ಯಮಕ್ಕೆ ಸಮಸ್ಯೆಗಳು ಎದುರಾಗುತ್ತಲೇ ಇರುತ್ತದೆ. ಹತ್ತು ಸಮಸ್ಯೆಗಳ ಮಧ್ಯೆ ಇದೊಂದು ಹೊಸ ಸಮಸ್ಯೆ ಎಂಬಂತೆ ಇದನ್ನು ಅನುಭವಿಸಲೇಬೇಕಾಗಿದೆ. ಶೀಘ್ರದಲ್ಲೇ ಈ ಸಮಸ್ಯೆಗಳೆಲ್ಲ ಪರಿಹಾರ ಕಾಣಲಿ, ಹೋಟೆಲು ಉದ್ಯಮಕ್ಕೆ ಹೊಸ ಬೆಳಕು ಮೂಡಲಿ ಎಂದು ಆಶಿಸೋಣ.



twitter/vijaykarnataka facebook.com/vijaykarnataka www.vijaykarnataka

ಬಿಬಿಎಂಪಿ ಸಭೆಯಲ್ಲಿ ಸರ್ವಾನುಮತದ ನಿರ್ಣಯ

# ಪ್ಲಾಸ್ಟಿಕ್ ಕಂಡ್ರೆ ಟ್ರೇಡ್ ಲೈಸೆನ್ಸ್ ರದ್ದು

**ವಿಕ ಸುದ್ದಿಲೋಕ** ಬೆಂಗಳೂರು

ನಿಷೇಧಿತ ಪ್ಲಾಸ್ಟಿಕ್ ತಯಾರಿಸುತ್ತಿರುವ ಕಾರ್ಖಾನೆಗಳು ಮತ್ತು ಪ್ಲಾಸ್ಟಿಕ್ ಬಳಸುತ್ತಿರುವ ಅಂಗಡಿಗಳ ಉದ್ದಿಮೆ ಪರವಾನಗಿಯನ್ನು (ಟ್ರೇಡ್ ಲೈಸೆನ್ಸ್) ರದ್ದು ಮಾಡಿ, ಅಧಿಕ ದಂಡ ವಿಧಿಸಲು ಬಿಬಿಎಂಪಿ ಕೌನ್ಸಿಲ್ ಸಭೆಯು ಶನಿವಾರ ಸರ್ವಾನುಮತದಿಂದ ನಿರ್ಣಯ ಕೈಗೊಂಡಿತು.

ಕೌನ್ಸಿಲ್ ಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಮೇಯರ್ ಆರ್.ಸಂಪತ್ ರಾಜ್ ಅವರು, ''ಅಂಗಡಿ ಮುಂಗಟ್ಟುಗಳು ಗ್ರಾಹಕರಿಗೆ ಪ್ಲಾಸ್ಟಿಕ್ ಕೈಚೀಲಗಳಲ್ಲೇ ದಿನಸಿ ಮತ್ತು ಇನ್ನಿತರೆ ಸಾಮಗ್ರಿಗಳನ್ನು ನೀಡುತ್ತಿದ್ದಾರೆ. ಇದರಿಂದ ನಗರದಲ್ಲಿ ಕಸದ ಸಮಸ್ಯೆ ಜಾಸ್ತಿಯಾಗುತ್ತಿದೆ. ಒಂದು ವಾರದೊಳಗೆ ಪ್ಲಾಸ್ಟಿಕ್ ಬಳಸುವುದನ್ನು ನಿಲ್ಲಿಸದಿದ್ದಲ್ಲಿ, ಅಂತಹ ಅಂಗಡಿಗಳಿಗೆ ನೀಡಿರುವ ಟ್ರೇಡ್ ಲೈಸೆನ್ಸ್ ಅನ್ನು ರದ್ದು ಮಾಡಬೇಕು. ಪ್ಲಾಸ್ಟಿಕ್ ತಯಾರಿಸುವ ಉದ್ದಿಮೆಗಳ ಮೇಲೂ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುವುದು,'' ಎಂದು ಹೇಳಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಕೈಚೀಲಗಳು ಮತ್ತು ಇನ್ನಿತರೆ ಪ್ಲಾಸ್ಟಿಕ್ ಉತ್ಪನ್ನಗಳ ತಯಾರಿಕೆ, ಮಾರಾಟ ಮಾಡುವ ಕೈಗಾರಿಕೆಗಳಿಗೆ ಬೀಗ ಮುದ್ರೆ ಹಾಕುವ ಹಾಗೂ ಪ್ಲಾಸ್ಟಿಕ್ ಬಳಸುವ ಅಂಗಡಿ ಮುಂಗಟ್ಟುಗಳ ಟ್ರೇಡ್ ಲೈಸೆನ್ಸ್ ರದ್ದುಪಡಿಸುವ ಸಂಬಂಧ ನಿರ್ಣಯವನ್ನು ಆಡಳಿತ ಪಕ್ಷದ ನಾಯಕ ಎಂ.ಶಿವರಾಜು ಮಂಡಿಸಿದರು. ಇದಕ್ಕೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

ನಿರ್ಣಯಕ್ಕೆ ಮೊದಲು ಮಾತನಾಡಿದ, ಕಾಂಗ್ರೆಸ್ ಸದಸ್ಯ ಮಹಮ್ಮದ್ ರಿಜ್ವಾನ್ ನವಾಬ್, ''ಪ್ಲಾಸ್ಟಿಕ್ ತಯಾರಕರು, ಮಾರಾಟಗಾರರು ಮತ್ತು ಬಳಕೆದಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಪ್ಲಾಸ್ಟಿಕ್ ಹಾವಳಿ ನಿಯಂತ್ರಿಸಿದರೆ, ಶೇ 40–50ರಷ್ಟು ಕಸದ ಪ್ರಮಾಣ ಕಡಿಮೆಯಾಗಲಿದೆ,'' ಎಂದರು. ಇದಕ್ಕೆ ಧ್ವನಿಗೂಡಿಸಿದ ಶಾಸಕಿ ಸೌಮ್ಯ ರೆಡ್ಡಿ, ''ಪ್ಲಾಸ್ಟಿಕ್ ಬಳಸುತ್ತಿರುವವರಿಗೆ ಅಧಿಕ ದಂಡ ವಿಧಿಸಬೇಕು. ಆಗ ಮಾತ್ರ ಪ್ಲಾಸ್ಟಿಕ್ ಹಾವಳಿಗೆ ಕಡಿವಾಣ ಬೀಳುತ್ತದೆ,'' ಎಂದರು.

ಆಡಳಿತ ಪಕ್ಷದ ನಾಯಕ ಎಂ.ಶಿವರಾಜು, ''ಪ್ಲಾಸ್ಟಿಕ್ ಹಾವಳಿ ನಿಯಂತ್ರಣಕ್ಕೆ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಿದೆ. ಈವರೆಗೆ 30 ಟನ್ ಪ್ಲಾಸ್ಟಿಕ್ ವಸ್ತುಗಳನ್ನು ಜಪ್ತಿ ಮಾಡಲಾಗಿದ್ದು, 40 ಲಕ್ಷ ರೂ. ದಂಡ ವಸೂಲಿ ಮಾಡಲಾಗಿದೆ,'' ಎಂದು ಸಭೆಗೆ ತಿಳಿಸಿದರು.

ಪ್ರತಿಪಕ್ಷ ನಾಯಕ ಪದ್ಮನಾಭರೆಡ್ಡಿ, ''2016ರಲ್ಲೇ ಪ್ಲಾಸ್ಟಿಕ್ ನಿಷೇಧಿಸಿ ಆದೇಶ ಹೊರಡಿಸಲಾಗಿದೆ. ಆದರೆ, ಅದು ಅನುಷ್ಠಾನಕ್ಕೆ ಬಂದಿಲ್ಲ. ಪ್ಲಾಸ್ಟಿಕ್ ತಯಾರಿಕೆ ಮತ್ತು ಮಾರಾಟ ತಡೆಯುವಲ್ಲಿ ಪಾಲಿಕೆ ಆಡಳಿತ ವಿಫಲವಾಗಿದೆ. ಪ್ಲಾಸ್ಟಿಕ್ ತಯಾರಕರು, ಮಾರಾಟಗಾರರ ಅಂಗಡಿ ಮುಂಗಟ್ಟುಗಳು, ಕಾರ್ಖಾನೆಗಳ ಮೇಲೆ ದಾಳಿ ನಡೆಸಿ ಕ್ರಮ ಜರುಗಿಸಬೇಕು. ದಾಳಿ ಹೆಸರಿನಲ್ಲಿ ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಡಬಾರದು'' ಎಂದು ಹೇಳಿದರು.

ಪಾಲಿಕೆ ಸಭೆಯಲ್ಲಿ ಮೇಯರ್ ಸಂಪತ್‌ರಾಜ್, ಉಪ ಮೇಯರ್ ಪದ್ಮಾವತಿ ನರಸಿಂಹಮೂರ್ತಿ, ಆಯುಕ್ತ ಮಂಜುನಾಥ ಪ್ರಸಾದ್ ಉಪಸ್ಥಿತರಿದ್ದರು.

**ಪ್ಲಾಸ್ಟಿಕ್ ತಯಾರಿಸುವ ಉದ್ದಿಮೆಗಳಿಗೆ ಬೀಗಮುದ್ರೆ**

**2016ರಲ್ಲಿ ನಿಷೇಧ ಹೇರಿದ್ದರೂ ಅನುಷ್ಠಾನವಾಗಿರಲಿಲ್ಲ**


**ಶ್ರೀ ಮಂಜುನಾಥ ಸ್ವೀಟ್ಸ್**

ಮದುವೆ, ಮುಂಜಿ ಮತ್ತು ಇತರ ಶುಭ ಸಮಾರಂಭಗಳಿಗೆ ಅತ್ಯುತ್ತಮ ಗುಣಮಟ್ಟದ ಸಿಹಿತಿನಿಸು ಮತ್ತುಖಾರದ ತಿನಿಸುಗಳನ್ನು ತಯಾರಿಸಿ ಸಗಟು ವ್ಯಾಪರದದರದಲ್ಲಿ ನೀಡಲಾಗುವುದು. ಹೋಟೆಲುಗಳಿಗೆ ಜಾಮೂನು ಮತ್ತುಇತರ ಸಿಹಿ ತಿನಿಸುಗಳನ್ನು ಆಕರ್ಷಕ ರಿಯಾಯಿತಿ ದರದಲ್ಲಿ ಸರಬರಾಜು ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

**ಶ್ರೀ. ಲೋಕೇಶ್,** ಮಾಲೀಕರು

**ಶ್ರೀ. ಮಂಜುನಾಥ ಸ್ವೀಟ್ಸ್**

ನಂ.511, 64ನೇ ಅಡ್ಡರಸ್ತೆ, 5ನೇ ವಿಭಾಗ,
ರಾಜಾಜಿನಗರ, ಬೆಂಗಳೂರು–560010
ದೂರವಾಣಿ: 9886033573



ಹಾರ್ದಿಕ ಶುಭಾಶಯಗಳನ್ನು ಕೋರುವ

**ಪ್ರಿಯದರ್ಶಿನಿ ರೆಸ್ಟೋರೆಂಟ್**

ಶ್ರೀ ರಾಮಕೃಷ್ಣ ಲಾಡ್ಜ್ ಕಟ್ಟಡ, ನಂ. 262,
ಸುಬೇದಾರ್ ಛತ್ರಂ ರಸ್ತೆ,
ಬೆಂಗಳೂರು – 560009
ದೂರವಾಣಿ: 22263793


ಜಾಹೀರಾತು
Gilli Solutions
Living Clean...
Kitchen Fume Exhaust Systems
Contact us today for an inspection
+91 94825 62737
+91 94825 62738
Gilli Solutions is proud to offer a continued, superior level of experience in manufacturing complete KITCHEN FUME EXHAUST SYSTEM & FRESH AIR SYSTEM that provide the highest performance, efficiency and capacity for the money.
From design to installation, after sales to maintenance, Gilli Solutions have an ongoing commitment to provide the best available service for the customer.
PRODUCTS WE MANUFACTURE
HOOD
HOOD
FILTER
DAMPER
GRILL
DUCTING
FRESH AIR FILTER
CENTRIFUGAL BLOWER
Features of our System
• Hoods are fabricated out of stainless steel & designed for use above grease-producing equipment and are available in several styles and configurations.
• Ducting are fabricated out of 20/22/24 galvanized steel sheet & supported with MS angle & threaded GI rods & bolted with GI suitable nut bolt.
Joints between two ducting flanges are fitted with double sided tape to avoid air leakages.
• Reliability and top performance are Assured with our Centrifugal Blowers.
SERVICE & MAINTENANCE
Our quality fume exhaust & fresh air system creates pleasing atmosphere in your kitchen room
GET A QUOTE
Ph : +91 94825 62737 / +91 94825 62738
# 151, 8th Cross,
Kempegowda Layout,
Ring Road, Laggere, Bangalore - 560 058.
gillisolutions@gmail.com
www.gillisolutions.com
like us on facebook
Don't cook up a firestorm by failing to maintain your kitchen exhaust system

RNP/KA/BGS/2172/2018-20, Licensed to post without prepayment
License No. WPP. 316, Posted at : PSO, Mysore Road, Banglaore. On 13 th every Month
Date of Published 10-07-2018




**If undelivered please return to : Bruhat Bengaluru Hotel Association :** # 87, "Shrestaboomi", Room No. 307, K.R. Road, V.V. Puram, Bengaluru-04, mail : bangalorehotelsassn@gmail.com. **"Athithi Devobhava"**- Printed and Published by K.N. Vasudeva Adiga, owned by : **Bruhat Bangalore Hotels Association,** Printed at Anu Process, 348/1, Bileka Halli, B.T.M. Layout, 6th Corss, Bannerghatta Road, Bangalore-560076. Published at Apt. No. 307, 3rd Floor, Shreshta Bhoomi, 87, K.R. Road, Bangalore-560004, **Editor : B. Chandrashekar Hebbar.**